# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್\ಉಪಲೋಕ್\ಬಿಸಿಡಿ\1447\2016\ಎಆರ್ಇ-3

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 13/9/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** 1) ಸತೀಶ್, ಸಹಾಯಕ ಅಭಿಯಂತರರು, ಬಿಬಿಎಂಪಿ ಕಾಂಪ್ಲೆಕ್ಸ್, ವಾರ್ಡ್ ನಂ.111, ಶಾಂತಲನಗರ, ಶಾಂತಿನಗರ ವಿಭಾಗ, ಬಹುಮಹಡಿ ಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು, 2) ಸೈಯದ್ ಶಬೀರ್ ಅಲಿ, ಅಕೌಂಟ್ಸ್ ಸೂಪರಿಟೆಂಡೆಂಟ್, ಬಿಬಿಎಂಪಿ ಕಾಂಪ್ಲೆಕ್ಸ್, ಶಾಂತಿನಗರ ವಿಭಾಗ, ಬಹುಮಹಡಿ ಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು, 3) ಡಿ.ಮೂರ್ತಿ, ಸಹಾಯಕ ಅಭಿಯಂತರರು, ವಾರ್ಡ್ ನಂ.116, ಶಾಂತಿನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 4) ಬಿ.ಎಸ್.ಮುಕುಂದ, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 5) ಎನ್.ಬಿ.ನಾಗರಾಜ್, ಅಕೌಂಟ್ಸ್ ಸೂಪರಿಟೆಂಡೆಂಟ್, ಶಾಂತಿನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 6) ನರಸಿಂಹರಾಜು, ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಬೆಂಗಳೂರು, 7) ಜಿ.ಎಲ್.ಸೋಮಶೇಖರ್, ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ.117, ಶಾಂತಿನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 8) ಎನ್.ಮಾರುತಿ, ಕಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.117, ಬಿಬಿಎಂಪಿ, ಬೆಂಗಳೂರು, 9) ಅಣ್ಣಯ್ಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.117, ಬಿಬಿಎಂಪಿ, ಬೆಂಗಳೂರು ಮತ್ತು 10) ಟಿ.ಸೆಲ್ವರಾಜ್, ಕಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.117, ಬಿಬಿಎಂಪಿ, ಬೆಂಗಳೂರು ಇವರುಗಳು ಸರ್ಕಾರಿ ನೌಕರರಾಗಿ ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*****

ಶ್ರೀ. ಡಿ. ಚಂದ್ರಮೋಹನ್, ನಂ. 807, 10ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, 2ನೇ ಹಂತ, ಇಂದಿರಾನಗರ, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು 1) ಮೋಹನ್‌ದಾಸ್, ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬಹುಮಹಡಿಗಳ ಕಟ್ಟಡ, ಬಿಬಿಎಂಪಿ ಸಂಕೀರ್ಣ, ಎಂ.ಜಿ.ರಸ್ತೆ, ಬೆಂಗಳೂರು, 2) ಚಂದ್ರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ,

7ನೇ ಮಹಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾಣಿಜ್ಯ ಸಂಕೀರ್ಣದ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು, 3) ಸತೀಶ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 111, ಶಾಂತಲ ನಗರ, ಶಾಂತಿನಗರ ವಿಭಾಗ, ಬಹುಮಹಡಿ ಕಟ್ಟಡ, ಬಿಬಿಎಂಪಿ ಸಂಕೀರ್ಣ, ಎಂ.ಜಿ.ರಸ್ತೆ, ಬೆಂಗಳೂರು ಮತ್ತು 4) ಸಯ್ಯದ್ ಸಭೀರ್ ಆಲಿ, ಅಕೌಂಟ್ಸ್ ಸೂಪರಿಟೆಂಡೆಂಟ್, ಶಾಂತಿನಗರ ವಿಭಾಗ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ, ಎಂ.ಜಿ.ರಸ್ತೆ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಬೆಂಗಳೂರು (ಇನ್ನು ಮುಂದೆ "1 ರಿಂದ 4 ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ಇವರ ಮೇಲೆ ದೂರನ್ನು ನೀಡಿದ್ದುದನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತದೆ.

2. ಗೌರವಾನ್ವಿತರ ದಿನಾಂಕ 01/03/2018 ರ ಆದೇಶದಂತೆ 1) ಶ್ರೀ.ಟಿ.ಮೂರ್ತಿ, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ದೊಮ್ಮಲೂರು ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 2) ಶ್ರೀ.ಪಿ.ವನರಾಜ್, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೊಮ್ಮನಹಳ್ಳಿ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 3) ಶ್ರೀ. ಬಿ.ಎಸ್.ಮುಕುಂದ, ಹಿಂದಿನ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ಉಪವಿಭಾಗ, ಪ್ರಸ್ತುತ ಬಿಬಿಎಂಪಿ, ಕೇಂದ್ರ ಕಛೇರಿ, ಪ್ರಾಜೆಕ್ಟ್, ಬೆಂಗಳೂರು, 4) ಶ್ರೀ.ಎನ್.ಬಿ.ನಾಗರಾಜ್, ಲೆಕ್ಕಾಧೀಕ್ಷಕರು, ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಷ್ಟ್ರೀಯ ಹೆದ್ದಾರಿ ವಿಭಾಗ, ಅರವಿಂದ ಭವನ, ಕೆ.ಆರ್.ವೃತ್ತ, ಬೆಂಗಳೂರು, ದೂ.ಸಂ.9448611646, 5) ಶ್ರೀ. ನರಸಿಂಹರಾಜು, ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವಿಭಾಗ, ಲೋಕೋಪಯೋಗಿ ಇಲಾಖೆ, ಅನೆಕ್ಸ್ ಬಿಲ್ಡಿಂಗ್, ಕುಣಿಕಲ್ ರಸ್ತೆ, ತುಮಕೂರು, ದೂ.ಸಂ.9448393400, 6) ಶ್ರೀ. ಜಿ.ಎಲ್. ಸೋಮಶೇಖರ್, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜಾಜಿನಗರ ಉಪವಿಭಾಗ, ಬಿಬಿಎಂಪಿ, 12ನೇ ಮುಖ್ಯ ರಸ್ತೆ, ರಾಜಾಜಿನಗರ, 2ನೇ ಬ್ಲಾಕ್, ಬೆಂಗಳೂರು, 7) ಶ್ರೀ. ಪಿ. ಶ್ರೀನಿವಾಸುಲು, ಕಿರಿಯ ಆರೋಗ್ಯ ನಿರೀಕ್ಷಕರು, ಶಾಂತಿನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 8) ಶ್ರೀ. ಎನ್.ಮಾರುತಿ, ಹಿಂದಿನ ಕಿರಿಯ ಆರೋಗ್ಯ ನಿರೀಕ್ಷಕರು, ಪ್ರಸ್ತುತ ವರದಿಗಾರರು, ಶಾಂತಿನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು, 9) ಶ್ರೀ. ಎನ್. ಅಣ್ಣಯ್ಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ಶಾಂತಿನಗರ ಉಪವಿಭಾಗ, ಬಿಬಿಎಂಪಿ, 9ನೇ ಮಹಡಿ, ಬೆಂಗಳೂರು ಮತ್ತು 10) ಶ್ರೀ. ಟಿ.ಸೆಲ್ವರಾಜ್, ಕಿರಿಯ ಆರೋಗ್ಯ ನಿರೀಕ್ಷಕರು, ಜೀವನ್‌ಭೀಮಾನಗರ, ಬಿಬಿಎಂಪಿ,

ಬೆಂಗಳೂರು ರವರುಗಳನ್ನು ಎದುರುದಾರರುಗಳನ್ನಾಗಿ ಸೇರ್ಪಡಿಸಲಾಗಿದೆ (ಇನ್ನು ಮುಂದೆ "5 ರಿಂದ 14 ಎದುರುದಾರರು" ಎಂದು ಕರೆಯಲ್ಪಡುತ್ತಾರೆ).

3. **ದೂರಿನ ಸಂಕ್ಷಿಪ್ತ ವಿವರಣೆ:-**

ವಾರ್ಡ್ ಸಂಖ್ಯೆ:111, 116 ಮತ್ತು 117 ಈ ಮೂರು ವಾರ್ಡ್‌ಗಳಲ್ಲಿ ದಿನಾಂಕ 14/12/2012 ರಿಂದ 01/12/2013 ರ ತನಕ ಕಸ ಸಾಗಾಣೆ ಮತ್ತು ವಿಲೇವಾಡಿ ಮಾಡಿರುವುದಕ್ಕೆ ದಿನಾಂಕ 11/09/2013 ರಂದು ಆರ್‌ಟಿಜಿಎಸ್ ಮುಖೇನಾ ಸುಮಾರು ರೂ. 45,60.000/- ಗಳನ್ನು ಪಡೆದಿರುತ್ತಾರೆ. ಸಹಾಯಕ ಅಭಿಯಂತರರು ಮತ್ತು ಗುತ್ತಿಗೆದಾರರ ಸಹಿ ಇರುವುದಿಲ್ಲ. ಹಣವನ್ನು ಗುತ್ತಿಗೆದಾರರಿಗೆ ಆರ್‌ಟಿಜಿಎಸ್ ಮುಖಾಂತರ ಸಂದಾಯವಾದ ಹಣವು ಯಾರ ಖಾತೆಗೆ ಸಂದಾಯವಾಗಿದೆ ಎಂಬುದಕ್ಕೆ ದಾಖಲೆಗಳಿರುವುದಿಲ್ಲ ಎಂದು ಆಪಾದಿಸಿರುತ್ತಾರೆ. ಹಣ ಪಾವತಿಯಾದ ಖಾತೆಗೆ ಸಂಬಂಧಿಸಿದ ಬ್ಯಾಂಕ್‌ನ ಖಾತೆಯ ಸಂಖ್ಯೆಯಾಗಲಿ ಅಥವಾ ಬ್ಯಾಂಕ್‌ನ ಹೆಸರು ಕಂಡುಬರುವುದಿಲ್ಲ. ಈ ರೀತಿ ಬಿಲ್ಲನ್ನು ತಯಾರು ಮಾಡಿ ತಾವೇ ಸ್ವಂತವಾಗಿ ರೂ. 47,22,041/- ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆದುದರಿಂದ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

4. 3ನೇ ಎದುರುದಾರರಾದ ಡಿ.ಸತೀಶ್ ರವರು ದಿನಾಂಕ 27/07/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಬಿಬಿಎಂಪಿ ಶಾಂತಿನಗರ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್‌ರಾಗಿ 05/11/2012 ರಿಂದ 08/10/2015 ರವರೆಗೆ ಸೇವೆ ಸಲ್ಲಿಸಿ, ಪ್ರಸ್ತುತ ಬಿಬಿಎಂಪಿ, ಬಿಟಿಎಂ ಲೇಔಟ್ ಉಪವಿಭಾಗ, ಬೆಂಗಳೂರು ಇಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ, ಶಾಂತಿನಗರ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರಾಗಿ ಕೆಲಸ ನಿರ್ವಹಿಸಿದ್ದು, ನಾನು ಮೇಲಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಜಂಟಿ ಆಯುಕ್ತರು ಇವರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಿರುತ್ತೇನೆ. ಕರ್ತವ್ಯದಲ್ಲಿ ಯಾವುದೇ ಲೋಪವೆಸಗಿರುವುದಿಲ್ಲ. ಟೆಂಡರ್ ಪ್ರಕ್ರಿಯೆ ಇತ್ಯಾದಿ ಪ್ರಕ್ರಿಯೆಗಳನ್ನು ವಿಭಾಗ ಕಛೇರಿಯಲ್ಲಿಯೇ ನಿರ್ವಹಿಸುತ್ತಾರೆ. ದೂರಿನ ಆಪಾದನೆಗಳಿಗೂ ನನಗೂ ಸಂಬಂಧವಿರುವುದಿಲ್ಲ. ಕೇವಲ ಕಸ ವಿಲೇವಾರಿ ಮಾಡುವ ಪೌರ ಕಾರ್ಮಿಕರಿಗೆ 30/31 ದಿನಗಳ ಹಾಜರಾತಿ ನೀಡಿದ್ದೇನೆಂದು ಆಪಾದಿಸಿ ನನ್ನ ಹೆಸರನ್ನು ಈ ಪ್ರಕರಣದಲ್ಲಿ ನಮೂದಿಸಲಾಗಿದೆ. ಕಸ ವಿಲೇವಾರಿ ಕೆಲಸವು ನಿರಂತರವಾಗಿ ನಡೆಯುತ್ತಿರುವುದರಿಂದ ನಾನು 30/31 ದಿನಗಳ ಹಾಜರಾತಿಯನ್ನು ಆರೋಗ್ಯ ಪರಿವೀಕ್ಷಕರು ನೀಡಿದ ನಂತರ ನಾನು ಅದನ್ನು ಪ್ರಮಾಣೀಕರಿಸಿರುತ್ತೇನೆ. ಶ್ರೀಮತಿ. ಎಸ್. ವೀಣಾ. ಮೆ. ಆರ್.ಕೆ.ಟ್ರಾನ್ಸ್‌ಪೋರ್ಟ್, ಬೆಂಗಳೂರು ಇವರು ಕಸ ಸಾಗಾಣಿಕೆಯಲ್ಲಿ ಯಾವುದೇ ತೊಂದರೆ ಮಾಡದೇ ಕಸವನ್ನು

ವಿಲೇವಾರಿ ಮಾಡಿದ್ದು, ಶಾಂತಿನಗರ ವಾರ್ಡ್‌ನ ವಿಭಾಗ/ಉಪವಿಭಾಗ ವ್ಯಾಪ್ತಿಯಲ್ಲಿ ಶುಚಿತ್ವವನ್ನು ಕಾಪಾಡಲು ಅನುವು ಮಾಡಿಕೊಟ್ಟದ್ದು, ಇದರಿಂದ ಸಾರ್ವಜನಿಕರಿಂದ, ಸ್ಥಳೀಯರಿಂದ, ಕಾರ್ಪೋರೇಟರ್‌ಗಳಿಂದಾಗಲೀ ಮತ್ತು ಶಾಸಕರಿಂದಾಗಲೀ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ಬಿಬಿಎಂಪಿ ಗೆ ಆರ್ಥಿಕ ಹೊರೆ ಉಂಟಾಗಿರುವುದಿಲ್ಲ. ಆಯುಕ್ತರು, ಜಂಟಿ ಆಯುಕ್ತರು, ಬಿಬಿಎಂಪಿ ಇವರು ಕೂಡ ಕಸ ವಿಲೇವಾರಿ ಕೆಸಲಗಳನ್ನು ಪರಿಶೀಲಿಸಿದ್ದು, ಪರಿವೀಕ್ಷಣಾ ವರದಿಯಲ್ಲಿ ಈ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದಿಲ್ಲ. ನಿಯಮಾನುಸಾರ ವೇತನವನ್ನು ನೀಡಲಾಗಿದೆ. ಆದುದರಿಂದ ದೂರನ್ನು ಮುಕ್ತಾಗೊಳಿಸುವಂತೆ ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

5. 4ನೇ ಎದುರುದಾರರು ದಿನಾಂಕ 11/06/2018 ರಂದು ತಮ್ಮ ಹೇಳಿಕೆಯನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಶಾಂತಿನಗರ ವಿಭಾಗ ಕಛೇರಿಯಲ್ಲಿ ಲೆಕ್ಕ ಅಧೀಕ್ಷಕನಾಗಿ ದಿನಾಂಕ 06/09/2013 ರಂದು ಕರ್ತವ್ಯದ ಮೇಲೆ ವರದಿ ಮಾಡಿಕೊಂಡಿದ್ದು, ದೂರಿನಲ್ಲಿ 2,83,32,246.00 ಬಿಲ್ಲು ಪಾವತಿಗೆ ಸಂಬಂಧಿಸಿದಂತೆ ಮಾಡಲಾಗಿರುವ ಆಕ್ಷೇಪಣೆಗೆ ಸಂಬಂಧಿಸಿದಂತೆ ದಿನಾಂಕ 25/09/2013 ರಂದು ಪಾವತಿಯಾಗಿರುವ ರೂ. 47,22,041.00 ಮಾತ್ರ ನನ್ನ ಅವಧಿಗೆ ಸಂಬಂಧಿಸಿದೆ. ಈ ಬಿಲ್ಲನ್ನು ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ ಇವರ ಕಾರ್ಯಾದೇಶ ಪತ್ರ ಸಂಖ್ಯೆ: ಕಾಪಾಅ/ಶಾನವಿ/ಕಾರ್ಯಾದೇಶ/01/2012-13, ದಿನಾಂಕ 14/12/2012 ರಲ್ಲಿ ನೀಡಿರುವ ಘನತ್ಯಾಜ್ಯ ನಿರ್ವಹಣೆ ಕಾರ್ಯಾದೇಶದನ್ವಯ ಕೆಲಸ ನಿರ್ವಹಿಸಿರುವ ಗುತ್ತಿಗೆದಾರರಿಗೆ ಜುಲೈ 2013 ಮಾಹೆಯ ಬಿಲ್ಲು ಪಾವತಿಗಾಗಿ ಸಲ್ಲಿಸಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರು ಶಾಂತಿನಗರ ಉಪ ವಿಭಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ದೃಢೀಕರಣದ ಆಧಾರದ ಮೇಲೆ ಪಾವತಿಸಲಾಗಿದೆ. ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರ ದೃಢೀಕರಣದ ಆಧಾರದ ಮೇಲೆ ಬಿಲ್ಲು ಪಾವತಿಸಬೇಕಾಗಿದ್ದು, ಅದರಂತೆ ಕ್ರಮ ಕೈಗೊಂಡಿರುತ್ತೇನೆ. ಬಿಲ್ಲಿನ ಮೇಲೆ ಸಹಾಯಕ ಅಭಿಯಂತರರ ಸಹಿ ಇರುವುದಿಲ್ಲ. ಬಿಲ್ಲು ಡಿಸಿ ಬಿಲ್ಲಾಗಿದ್ದು, ಇದರಲ್ಲಿ ಬಿಲ್ಲು ಪಾವತಿಗೆ ಸಲ್ಲಿಸುವ ಅಧಿಕಾರಿ ಮತ್ತು ಮೇಲು ಸಹಿ ಮಾಡುವ ಅಧಿಕಾರಿಗಳು ಮಾತ್ರ ಸಹಿ ಮಾಡಬೇಕಾಗಿದ್ದು, ಅದರಂತೆ ಬಿಲ್ಲು ಪಾವತಿಗೆ ಸಲ್ಲಿಸುವ ಅಧಿಕಾರಿಯಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಿ ಮಾಡಿರುತ್ತಾರೆ. ಈ ಕೆಲಸ ಸಮರ್ಪಕವಾಗಿ ಕೈಗೊಂಡಿರುತ್ತಾರೆ ಎಂಬ ಬಗ್ಗೆ ಸಹಾಯಕ ಅಭಿಯಂತರರು ಬಿಲ್ಲನ್ನು ಪಾವತಿಗೆ ಸಲ್ಲಿಸಿರುವ ಕಛೇರಿ ಟಿಪ್ಪಣಿಯಲ್ಲಿ ಸಹಿ ಮಾಡಿರುತ್ತಾರೆ. ಬಿಲ್ಲುಗಳನ್ನು ಕಛೇರಿಯಲ್ಲಿ ಸ್ವೀಕರಿಸಿದಾಗ ಬಿಲ್ಲು ರಿಜಿಸ್ಟರ್‌ನಲ್ಲಿ ದಾಖಲಿಸಿ ಬಿ.ಆರ್. ಸಂಖ್ಯೆ ನೀಡಲಾಗುತ್ತಿದ್ದು,

ಬಿಲ್ಲುಗಳ ಪಾವತಿಗೆ ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆಯಾದಾಗ ಜೇಷ್ಠತೆ ಆಧಾರದ ಮೇಲೆ ಬಿಲ್ಲು ಪಾವತಿಸಲಾಗುತ್ತಿದೆ. ಅದರಂತೆ ಈ ಬಿಲ್ಲನ್ನು ದಿನಾಂಕ 31/08/2013 ರಂದು ಬಿ.ಆರ್. ಸಂಖ್ಯೆ 166/ಎ ನಲ್ಲಿ ದಾಖಲಿಸಿದ್ದು, ಅನುದಾನದ ಲಭ್ಯತೆ ಮೇರೆಗೆ ದಿನಾಂಕ 11/09/2013 ರಂದು ಪಾವತಿಸಲಾಗಿದೆ. ಬಿಲ್ಲಿನ ಮೊತ್ತದಲ್ಲಿ ಟಿಡಿಎಸ್ ರೂ. 1,13,329/- ಕಟಾಯಿಸಿ ರೂ. 45,60,000/- ಗಳನ್ನು ಆರ್‌ಟಿಜಿಎಸ್ ಮೂಲಕ ಮೆ// ಆರ್.ಕೆ.ಟ್ರಾನ್ಸ್‌ಪೋರ್ಟ್ ಮಾಲೀಕರು ಎಸ್.ವೀಣಾ ಇವರ ಬ್ಯಾಂಕ್ ಖಾತೆ ಸಂಖ್ಯೆ 54025821542, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೂಡಿ ಬ್ರಾಂಚ್ ಅವೆನ್ಯೂ ರಸ್ತೆ ಇವರಿಗೆ ದಿನಾಂಕ 11/09/2013 ರಲ್ಲಿ ಪತ್ರ ನೀಡಲಾಗಿದ್ದು, ಪ್ರತಿಯನ್ನು ಲಗತ್ತಿಸಿರುತ್ತೇನೆ. ಸದರಿ ಪತ್ರದನ್ವಯ ರೂ. 45,60,000/- ಗಳನ್ನು ದಿನಾಂಕ 11/09/2013 ರಂದು ಆರ್.ಕೆ.ಟ್ರಾನ್ಸ್‌ಪೋರ್ಟ್ ರವರ ಖಾತೆಗೆ ವರ್ಗಾವಣೆಯಾಗಿದ್ದು, ಬ್ಯಾಂಕ್‌ಪಾಸ್ ಶೀಟ್‌ನ ಪ್ರತಿಯನ್ನು ಲಗತ್ತಿಸಿರುತ್ತೇನೆ. ಆದುದರಿಂದ ದುರುಪಯೋಗ ಆಗಿರುವುದಿಲ್ಲ. ದೂರಿನಲ್ಲಿ ಒಂದು ವರ್ಷಕ್ಕೆ ರೂ. 47,22,041/- ಗಳ ಒಂದು ಬಿಲ್ಲು ಮಾಡುವುದಕ್ಕೆ ಅಧಿಕಾರ ಇರುವುದಾಗಿಯೂ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸ್ವಯಂ ಬಿಲ್ಲು ಮಾಡಲು ಕಾರ್ಯವ್ಯಾಪ್ತಿ ಇರುವುದಿಲ್ಲ ಎಂದು ತಿಳಿಸಲಾಗಿದೆ. ಕಾರ್ಯಾದೇಶ ಪತ್ರ ದಿನಾಂಕ 14/15/2012 ರನ್ವಯ ಪ್ರತಿ ದಿನ ಘನತ್ಯಾಜ್ಯ ನಿರ್ವಹಣೆ ಕಾರ್ಯನಿರ್ವಹಿಸಲು ಮಾಸಿಕ ಮೊತ್ತ ರೂ. 47,22,041/- ರಂತೆ ದಿನಾಂಕ 01/01/2013 ರಿಂದ ಜಾರಿಗೆ ಬರುವಂತೆ ಕಾರ್ಯಾದೇಶ ನೀಡಲಾಗಿದ್ದು, ಇದು ಮಾಸಿಕ ದರವಾಗಿರುತ್ತದೆ. ಅದರಂತೆ ಜನವರಿ 2013 ರಿಂದ ಪ್ರತಿ ಮಾಹೆ ಪಾವತಿಸಲಾಗಿದೆ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಉಪ ವಿಭಾಗ ಮಟ್ಟದ ಅಧಿಕಾರಿಯಾಗಿದ್ದು, ಘನ ತ್ಯಾಜ್ಯ ವಿಲೇವಾರಿಯ ಮೇಲ್ವಿಚಾರಣಾ ಅಧಿಕಾರಿಯಾಗಿರುವುದರಿಂದ ಅವರೇ ಬಿಲ್ಲು ತಯಾರಿಸಬೇಕಾಗಿರುತ್ತದೆ. ಟಿಪ್ಪಣಿ ಹಾಳೆಯಲ್ಲಿ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿರುವ ಆಧಾರದ ಮೇಲೆ ಬಿಲ್ಲು ಪಾವತಿಸಲಾಗಿದೆ. ಕೆಲಸ ಸಮರ್ಪಕವಾಗಿ ನಿರ್ವಹಿಸಿರುವುದನ್ನು ದೃಢೀಕರಿಸಿರುವ ಜವಾಬ್ದಾರಿ ಕ್ಷೇತ್ರ ಮೇಲ್ವಿಚಾರಕದ್ದಾಗಿರುತ್ತದೆ. ಅವರ ದೃಢೀಕರಣದ ಆಧಾರದ ಮೇಲೆ ಬಿಲ್ಲನ್ನು ಪರಿಶೀಲಿಸಿ ಕಟಾವಣೆಗಳನ್ನು ಮಾಡಿ ಆರ್.ಟಿ.ಜಿ.ಎಸ್ ಮೂಲಕ ಪಾವತಿಸಲಾಗಿದೆ.

ರೂ. 84,913/- ಗಳನ್ನು ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಜೂನ್ 2013 ಮತ್ತು ಜುಲೈ 2013 ಮಾಹೆಗಳ ಬಿಲ್ಲುಗಳ ಮಾತ್ರ ನನ್ನ ಅವಧಿಗೆ ಸಂಬಂಧಿಸಿರುತ್ತದೆ. ಕಾರ್ಯಪಾಲಕ ಅಭಿಯಂತರರು ಶಾಂತಿನಗರ ವಲಯ ಇವರ ಕಾರ್ಯಾದೇಶ ಸಂಖ್ಯೆ: ಕಾಪಾಅ/ಶಾನವಿ/ಕಾರ್ಯಾದೇಶ/02/2013-14 ದಿನಾಂಕ 19/03/2013 ರಲ್ಲಿ

ಸ್ವೀಪಿಂಗ್ ಗುತ್ತಿಗೆಯನ್ನು ರದ್ದುಪಡಿಸಿದ ಹಿನ್ನೆಲೆಯಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಪೌರಕಾರ್ಮಿಕರು, ಆಟೋಟಿಪ್ಪರ್ ಮತ್ತು ಲಾರಿಯನ್ನು ಉಪಯೋಗಿಸಿಕೊಂಡು ನಿರ್ವಹಿಸುವ ಬಗ್ಗೆ ಈ ಕೆಳಕಂಡಂತೆ ಕಾರ್ಯಾದೇಶ ನೀಡಲಾಗಿದೆ.

- ಮೆ// ಕೃಪ ಎಂಟರ್‌ಪ್ರೈಸಸ್
  (ಎ) ಮಿನ್ಸ್ಕ ಸ್ಕೋಯರ್ ಇಂದ ಡಿಕನ್‌ಸನ್ ರಸ್ತೆಯವರೆಗೆ ಮಾಹೆಯಾನ ರೂ. 84,913/-
  (ಬಿ) ಡಿಕನ್‌ಸನ್ ರಸ್ತೆಯಿಂದ ಎ.ಎಸ್.ಸಿ ಸೆಂಟರ್‌ವರೆಗೆ ಮಾಹೆಯಾನ ರೂ. 84,913/-
  (ಸಿ) ಎ.ಎಸ್.ಸಿ ಸೆಂಟರ್ ಸಿಗ್ನಲ್ ಇಂದ ಪೆಟ್ರೋಲ್ ಬಂಕ್‌ವರೆಗೆ ಮಾಹೆಯಾನ ರೂ. 84,913/-
- ಪವನ್ ಹೌಸ್‌ಕೀಪಿಂಗ್ ಅಂಡ್ ಅಲೈಡ್ ಸರ್ವೀಸ್
  (ಎ) ದೊಮ್ಮಲೂರು ಫ್ಲೈ ಒವರ್ ಇಂದ ದೊಮ್ಮಲೂರು ಪ್ರೈಮರಿ ಶಾಲೆಯ ಪೆಟ್ರೋಲ್ ಬಂಕ್‌ವರೆಗೆ ಮಾಹೆಯಾನ ರೂ. 84,913/-
  ಈ ಕಾರ್ಯದೇಶಗಳ ಪ್ರತಿಗಳನ್ನು ಅನುಬಂಧ-6 ರಲ್ಲಿ ಲಗತ್ತಿಸಿರುತ್ತೇನೆ. ಈ ಕಾರ್ಯದೇಶಗಳನ್ವಯ ಮಾರ್ಚ್ 2013 ಮಾಹೆಯಿಂದ ಪ್ರತಿ ತಿಂಗಳು ಬಿಲ್ಲು ಪಾವತಿಸಲಾಗಿರುತ್ತದೆ.
- ಮೇಲ್ಕಂಡ ಕಾರ್ಯಾದೇಶಗಳನ್ವಯ ಜೂನ್ 2013 ಮತ್ತು ಜುಲೈ 2013 ಮತ್ತು ಜುಲೈ 2013 ಮಾಹೆಗಳಲ್ಲಿ ಗುತ್ತಿಗೆದಾರರು ಸ್ವಚ್ಛತಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿರುತ್ತಾರೆ ಎಂಬುದಾಗಿ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿ ಡಿಸಿ ಬಿಲ್ಲು ತಯಾರಿಸಿ ಕಛೇರಿ ಟಿಪ್ಪಣಿಯೊಂದಿಗೆ ಪಾವತಿಗೆ ಸಲ್ಲಿಸಿರುತ್ತಾರೆ.
- ಈ ಬಿಲ್ಲುಗಳನ್ನು ವಿಭಾಗ ಕಛೇರಿಯ ಬಿಲ್ಲು ರಿಜಿಸ್ಟರ್‌ನಲ್ಲಿ ದಾಖಲಿಸಿ ಬಿ.ಆರ್.ಸಂಖ್ಯೆ ನೀಡಲಾಗಿದ್ದು, ಬಿ.ಆರ್.ರಿಜಿಸ್ಟರ್‌ನ ಪ್ರತಿಯನ್ನು ಅನುಬಂಧ-8 ರಲ್ಲಿ ಲಗತ್ತಿಸಿರುತ್ತೇನೆ. ಈ ಬಿಲ್ಲುಗಳ ಪಾವತಿಗೆ ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆಯಾದ ನಂತರ ಕೆಳಕಂಡಂತೆ ಹಣ ಪಾವತಿಸುವ ಬಗ್ಗೆ ಸಿಂಡಿಕೇಟ್ ಬ್ಯಾಂಕ್ ಬಿಡಬ್ಲ್ಯೂಎಸ್‌ಎಸ್‌ಬಿ ಶಾಖೆ ಇವರಿಗೆ ದಿನಾಂಕ 18/11/2013 ಮತ್ತು 03/02/2014 ರಂದು ಪತ್ರ ವ್ಯವಹಾರ ಬರೆಯಲಾಗಿದೆ.

  ಜೂನ್ 2013:
  ಕೃಪ ಎಂಟರ್‌ಪ್ರೈಸಸ್ - 82,363.00 * 3 = 2,47,089.00
  ಪವನ್ ಎಂಟಪ್ರೈಸಸ್ - 82,363.00 * 1 = 82,363.00

  ಜುಲೈ 2013:

ಕೃಪ ಎಂಟರ್‌ಪ್ರೈಸಸ್ – 82,363.00 * 3 = 2,47,089.00

ಪವನ್ ಎಂಟಪ್ರೈಸಸ್ – 82,363.00 * 1 = 82,363.00

ದಿನಾಂಕ 18/11/2013 ಹಾಗೂ 04/02/2014 ರಂದು ಮೆ// ಕೃಪ ಎಂಟರ್‌ಪ್ರೈಸಸ್ ಹಾಗೂ ಮೆ// ಪವನ್ ಹೌಸ್ ಕೀಪಿಂಗ್ ಅಂಡ್ ಅಲ್ಯಾಡ್ ಸರ್ವಿಸಸ್ ರವರ ಹೆಸರಿಗೆ ಹಣ ವರ್ಗಾವಣೆಯಾಗಿದೆ.

ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆಯಾಗಿರುವ ಆಧಾರದ ಮೇಲೆ ಬಿಲ್ಲುಗಳ ಜೇಷ್ಠತೆ ಆಧಾರದ ಮೇಲೆ ಬಿಲ್ಲು ಪಾವತಿಸಬೇಕಾಗಿದ್ದು, ಕೆಲವು ಬಾರಿ ವಿಳಂಬವಾಗುವ ಸಾಧ್ಯತೆ ಇರುತ್ತದೆ. ಸಂಬಂಧಪಟ್ಟ ಗುತ್ತಿಗೆದಾರರ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ.

- ಮಾನ್ಯ ಉಪ ನಿಯಂತರಕರು (ಲೆಕ್ಕಪತ್ರ) ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ಇವರ ತನಿಖಾ ವರದಿ ಕಂಡಿಕೆ 4.17 ರಲ್ಲಿ ಕಾರ್ಯಾದೇಶದಲ್ಲಿನಂತೆ ದೂರಿನಲ್ಲಿ ತಿಳಿಸಿರುವ ಕಸ ವಿಲೇವಾರಿ ಬಿಲ್ಲುಗಳನ್ನು ಪಾವತಿಸುವಾಗ ಕಾರ್ಮಿಕರಿಗೆ ಮಾಸಿಕ ವೇತನವನ್ನು ಚೆಕ್/ ಇ.ಸಿ.ಎಸ್/ ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಿರುವುದನ್ನು ಮತ್ತು ಇ.ಎಸ್.ಐ/ ಪಿ.ಎಫ್/ ನೋಂದಣಿ ಮಾಡಿಸಿರುವ ಹಾಗೂ ವಂತಿಗೆ ಪಾವತಿಸಿರುವುದನ್ನು ಮತ್ತು ಖಚಿತಪಡಿಸಿಕೊಳ್ಳದ ಆರ್.ಕೆ.ಟ್ರಾನ್ಸ್‌ಪೋರ್ಟ್ ಬಿಲ್ಲುಗಳನ್ನು ಪಾಸು ಮಾಡಿ ಹಣ ಪಾವತಿಸಲು ಶಿಫಾರಸ್ಸು ಮಾಡಿ ಗುತ್ತಿಗೆದಾರರಿಗೆ ಹಣ ಪಾವತಿಸಿ ಕರ್ತವ್ಯ ಲೋಪ ಮಾಡಿರುವುದಾಗಿ ವರದಿ ಸಲ್ಲಿಸಿರುತ್ತಾರೆ. ಗುತ್ತಿಗೆದಾರರಿಗೆ ಬಿಲ್ಲು ಪಾವತಿಸುವ ಮೊದಲು ಅದರ ಹಿಂದಿನ ಮಾಹೆಯ ವೇತನ ಪಾವತಿ ಇ.ಎಸ್.ಐ/ ಪಿ.ಎಫ್/ ವಂತಿಗೆ ಪಾವತಿಗಳನ್ನು ಖಚಿತಪಡಿಸಿಕೊಳ್ಳಲಾಗಿದೆ. ಗುತ್ತಿಗೆದಾರರು ಘನತ್ಯಾಜ್ಯ ವಿಲೇವಾರಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ ಬಗ್ಗೆ ವಿಲೇವಾರಿಯ ಮೇಲ್ವಿಚಾರಕರಾದ ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಬೇಕು, ದೃಢೀಕರಣದ ಆಧಾರದ ಮೇಲೆ ಬಿಲ್ಲು ಪಾವತಿಸಲಾಗಿದೆ.

- ಜೂನ್ 2013 ಮತ್ತು ಜುಲೈ 2013 ಮಾಹೆಗಳ ಬಿಲ್ಲುಗಳನ್ನು ಪಾವತಿಸುವ ಸಂದರ್ಭದಲ್ಲಿ ಹಿಂದಿನ ಮಾಹೆಯ ಇ.ಎಸ್.ಐ ಮತ್ತು ಪಿ.ಎಫ್ ವಂತಿಗೆ ಪಾವತಿಸಿರುವ ಚಲನ್ ಪ್ರತಿಗಳನ್ನು ಪಡೆಯಲಾಗಿದೆ.

- ಬಿಲ್ಲುಗಳನ್ನು ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿ ಸಲ್ಲಿಸಿದ್ದು, ಅವುಗಳು ಕಾರ್ಯಾದೇಶ ಮತ್ತು ಕರಾರು ಪತ್ರಗಳ ಷರತ್ತುಗಳ ಪ್ರಕಾರ

ಇರುವುದನ್ನು ಪರಿಶೀಲಿಸಿ ಯಾವುದೇ ನ್ಯೂನ್ಯತೆ ಕಂಡು ಬರದೆ ಇದ್ದುದರಿಂದ ಯಾವುದೇ ಷರಾ ಬರೆಯದೇ ಪಾವತಿಗೆ ಸಲ್ಲಿಸಲಾಗಿರುತ್ತದೆ.

ದಿನಾಂಕ 14/12/2012 ರಂದು ಕಾರ್ಯಾದೇಶ ನೀಡಲಾಗಿದ್ದು, ಆ ದಿನಾಂಕದಿಂದ ಮೇ 2013ನೇ ಮಾಹೆಯವರೆಗೂ ಬಿಲ್ಲು ಪಾವತಿಸಲಾಗಿದ್ದು, ನಾನು ಸದರಿ ಕಛೇರಿಯಲ್ಲಿ ಕರ್ತವ್ಯದ ಮೇಲೆ ವರದಿ ಮಾಡಿಕೊಂಡ ನಂತರ ಜೂನ್ 2013 ಮತ್ತು ಜುಲೈ 2013 ಮಾಹೆಗಳ ಬಿಲ್ಲುಗಳನ್ನು ಪಾವತಿಸಲು ಮಾತ್ರ ಕ್ರಮ ಕೈಗೊಂಡಿರುತ್ತೇನೆ. ಈ ಬಿಲ್ಲುಗಳನ್ನು ಸಹ ಕಾರ್ಯಾದೇಶ ಮತ್ತು ಕರಾರು ಪತ್ರಗಳ ಷರತ್ತುಗಳನ್ವಯ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿರುತ್ತಾರೆ ಎಂದು ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿದ ಆಧಾರದ ಮೇಲೆ ಪಾವತಿಸಲಾಗಿದೆ. ಆದುದರಿಂದ ಈ ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

6. 5ನೇ ಎದುರುದಾರರಾದ ಡಿ.ಮೂರ್ತಿ, ಸಹಾಯಕ ಇಂಜಿನಿಯರ್, ಬಿಬಿಎಂಪಿ, ದೊಮ್ಮಲೂರು ಉಪವಿಭಾಗ, ಬೆಂಗಳೂರು ರವರು ದಿನಾಂಕ 27/07/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಬಿಬಿಎಂಪಿ ಶಾಂತಿನಗರ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್‌ರಾಗಿ 24/09/2010 ರಿಂದ 18/11/2016 ರವರೆಗೆ ಸೇವೆ ಸಲ್ಲಿಸಿ, ಪ್ರಸ್ತುತ ಬಿಬಿಎಂಪಿ, ದೊಮ್ಮಲೂರು ಉಪವಿಭಾಗ, ಬೆಂಗಳೂರು ಇಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ದೂರುದಾರರು ನನ್ನ ಹೆಸರನ್ನು ನಮೂದಿಸಿಲ್ಲ. ಬಿಬಿಎಂಪಿ ಶಾಂತಿನಗರ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರಾಗಿ ಕೆಲಸ ನಿರ್ವಹಿಸಿದ್ದು, ಮೇಲಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಜಂಟಿ ಆಯುಕ್ತರು ಇವರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಿರುತ್ತೇನೆ. ಟೆಂಡರ್ ಪ್ರಕ್ರಿಯೆ ಇತ್ಯಾದಿ ಪ್ರಕ್ರಿಯೆಗಳನ್ನು ವಿಭಾಗ ಕಛೇರಿಯಲ್ಲಿಯೇ ನಿರ್ವಹಿಸುತ್ತಾರೆ. ಕಸ ವಿಲೇವಾರಿ ಕೆಲಸವು ನಿರಂತರವಾಗಿ ನಡೆಯುತ್ತಿರುವುದರಿಂದ ನಾನು 30/31 ದಿನಗಳ ಹಾಜರಾತಿಯನ್ನು ಆರೋಗ್ಯ ಪರಿವೀಕ್ಷಕರು ನೀಡಿದ ನಂತರ ನಾನು ಅದನ್ನು ಪ್ರಮಾಣೀಕರಿಸಿರುತ್ತೇನೆ. ಶ್ರೀಮತಿ. ಎಸ್. ವೀಣಾ. ಮೆ. ಆರ್.ಕೆ.ಟ್ರಾನ್ಸ್‌ಪೋರ್ಟ್, ಬೆಂಗಳೂರು ಇವರು ಕಸ ಸಾಗಾಣಿಕೆಯಲ್ಲಿ ಯಾವುದೇ ತೊಂದರೆ ಮಾಡದೇ ಕಸವನ್ನು ವಿಲೇವಾರಿ ಮಾಡಿದ್ದು, ಶಾಂತಿನಗರ ವಾರ್ಡ್‌ನ ವಿಭಾಗ/ಉಪವಿಭಾಗ ವ್ಯಾಪ್ತಿಯಲ್ಲಿ ಶುಚಿತ್ವವನ್ನು ಕಾಪಾಡಲು ಅನುವು ಮಾಡಿಕೊಟ್ಟಿದ್ದು, ಇದರಿಂದ ಸಾರ್ವಜನಿಕರಿಂದ, ಸ್ಥಳೀಯರಿಂದ, ಕಾರ್ಪೋರೇಟರ್‌ಗಳಿಂದಾಗಲೀ ಮತ್ತು ಶಾಸಕರಿಂದಾಗಲೀ ಯಾವುದೇ

ದೂರುಗಳು ಸ್ವೀಕೃತವಾಗಿರುವುದಿಲ್ಲ. ಬಿಬಿಎಂಪಿ ಗೆ ಆರ್ಥಿಕ ಹೊರೆ ಉಂಟಾಗಿರುವುದಿಲ್ಲ. ಆಯುಕ್ತರು, ಜಂಟಿ ಆಯುಕ್ತರು, ಬಿಬಿಎಂಪಿ ಇವರು ಕೂಡ ಪರಿಶೀಲಿಸಿದ್ದು, ಪರಿವೀಕ್ಷಣಾ ವರದಿಯಲ್ಲಿ ಈ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದಿಲ್ಲ. ಆದುದರಿಂದ ದೂರುದಾರರು ಸಲ್ಲಿಸಿರುವ ದೂರನ್ನು ಮುಕ್ತಾಗೊಳಿಸುವಂತೆ ಕೋರಿರುತ್ತಾರೆ.

7. 6ನೇ ಎದುರುದಾರರಾದ ಪಿ. ವನರಾಜ, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ:192, ಬೇಗೂರು, ಬಿಬಿಎಂಪಿ, ಬೊಮ್ಮನಹಳ್ಳಿ ವಲಯ, ಬೆಂಗಳೂರು ಇವರು ದಿನಾಂಕ 16/04/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ದೂರುದಾರರಾದ ಶ್ರೀ. ಡಿ. ಚಂದ್ರಮೋಹನ್ ರವರು ದಾಖಲಿಸಿರುವ ದೂರುಗಳು 2013-14ನೇ ಸಾಲಿನ ನಂತರದ ಬಿಲ್ಲಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ದಿನಾಂಕ 21/02/2013 ರಂದು ಶಾಂತಿನಗರ ಉಪವಿಭಾಗದಿಂದ ಕರ್ತವ್ಯದಿಂದ ಬಿಡುಗಡೆ ಮಾಡಿರುತ್ತಾರೆ. ತದ ನಂತರ ಬೊಮ್ಮನಹಳ್ಳಿ ಉಪವಿಭಾಗದಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಆದುದರಿಂದ ಸದರಿ ಕಸ ನಿರ್ವಹಣೆ ಮಾಡುವ ಅಥವಾ ಅದಕ್ಕೆ ಸಂಬಂಧಿಸಿದಂತೆ ಬಿಲ್ಲುಗಳನ್ನು ತಯಾರಿಸಿರುವುದಿಲ್ಲ. ದಿನಾಂಕ 21/02/2013 ರಿಂದ ಶಾಂತಿನಗರ ಉಪವಿಭಾಗದಿಂದ ವರ್ಗಾವಣೆಗೊಂಡು, ಕರ್ತವ್ಯದಿಂದ ಬಿಡುಗಡೆ ಹೊಂದಿರುವುದರಿಂದ ಹಾಗೂ 2013-14ನೇ ಸಾಲಿನಿಂದ ನನ್ನ ಮೇಲೆ ಕಸ ನಿರ್ವಹಣೆಗೆ ಬಿಲ್ಲು ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದೂರು ಇಲ್ಲದ ಕಾರಣ ಕೈಬಿಡಬೇಕೆಂದು ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

8. 7ನೇ ಎದುರುದಾರರಾದ ಶ್ರೀ. ಬಿ.ಎಸ್. ಮುಕುಂದ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ-ಯಲಹಂಕ ವಿಭಾಗ, ಬಿಬಿಎಂಪಿ, ಬೆಂಗಳೂರು ರವರು ದಿನಾಂಕ 27/07/2018 ರ ತಮ್ಮ ತಕರಾರಿನಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ:

- ಪ್ಯಾಕೇಜ್ ನಂ.ಇ-13 ರ ಘನತ್ಯಾಜ್ಯ ವಿಲೇವಾರಿ ಕಾಮಗಾರಿಗೆ ಕಾರ್ಯಾದೇಶ ನೀಡುವ ಮುನ್ನ ರೂ. 20,33,290/- ಗಳಿಗೆ ಗುತ್ತಿಗೆದಾರರಿಂದ ಕಾಮಗಾರಿಯ ಭದ್ರತಾ ಠೇವಣಿಯನ್ನು ದಿನಾಂಕ 16/11/2012 ರಂದು ಬಿಜಿ ರೂಪದಲ್ಲಿ ಪಡೆದು ಕಾರ್ಯಾಯೋಜನೆಯಂತೆ ಒದಗಿಸಬೇಕಾದ ವಾಹನಗಳು, ಸಲಕರಣೆಗಳನ್ನು ಕೆಳಕಂಡಂತೆ ಒದಗಿಸುವಂತೆ ಕಾರ್ಯಾದೇಶದಲ್ಲಿ ಸೂಚಿಸಲಾಗಿರುತ್ತದೆ. ಶಾಂತಿನಗರ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. 111, 116 ಮತ್ತು 117 ರ ಸಹಾಯಕ ಅಭಿಯಂತರರು ಹಾಗೂ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು

ದಿನಾಂಕ 10/12/2012 ರಲ್ಲಿ ಟಿಪ್ಪಣಿ 2 ರ ಕ್ರಮ ಸಂಖ್ಯೆ: 1, 2 ಮತ್ತು 3 ರಲ್ಲಿನ ನೀಡಿರುವ ವರದಿ ಮತ್ತು ಶಿಫಾರಸ್ಸನ್ನು ಆಧರಿಸಿ ಅಧೀಕ್ಷಕ ಅಭಿಯಂತರರು, ಪೂರ್ವ ವಲಯ ಮುಖ್ಯ ಅಭಿಯಂತರರು, ಪೂರ್ವ ವಲಯ ಹಾಗೂ ಜಂಟಿ ಆಯುಕ್ತರು, ಪೂರ್ವ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗೆ ತಂದು ಅನುಮೋದನೆ ಪಡೆದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

- ಗುತ್ತಿಗೆದಾರರಾದ ಶ್ರೀಮತಿ. ಎಸ್.ವೀಣಾ ಮೇ// ಆರ್.ಕೆ.ಟ್ರಾನ್ಸ್‌ಪೋರ್ಟ್ ರವರು ಅತೀ ಕಡಿಮೆ ದರ ನಮೂದಿಸಿದ್ದು, ಸದರಿಯವರು ಪ್ರತಿ ಕಂಪ್ಯಾಕ್ಟರ್‌ಗೆ ತಿಂಗಳೊಂದಕ್ಕೆ ರೂ. 1,57,458/- ಗಳಂತೆ ಐದು ಕಂಪ್ಯಾಕ್ಟರ್‌ಗಳಿಗೆ ಒಟ್ಟು ರೂ. 7,87,290/- ಗಳನ್ನು ದರ ನಮೂದಿಸಿರುತ್ತಾರೆ. ಸದರಿಯವರ ಟೆಂಡರ್‌ನ್ನು ಅಧೀಕ್ಷಕ ಅಭಿಯಂತರರು ದಿನಾಂಕ 18/09/2012 ರಂದು ಟೆಂಡರ್ ನೋಟಿಫಿಕೇಷನ್ ನೀಡಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾರ್ಯಾದೇಶವನ್ನು ನೀಡಲು ಸೂಚಿಸಿ ಕಾರ್ಯಪಾಲಕ ಅಭಿಯಂತರರಿಗೆ ಕಡತವನ್ನು ರವಾನಿಸಲಾಗಿರುತ್ತದೆ.
- ಉಪ ನಿಯಂತ್ರಕರು (ಲೆಕ್ಕಪತ್ರ) ತಾಂತ್ರಿಕ ವಿಭಾಗ ರವರು ತಮ್ಮ ವರದಿಯಲ್ಲಿ ದಿನಾಂಕ 10/12/2012 ರ ಕಡತದ ಸಂಖ್ಯೆ: ಎಇಇ/ಎಸ್‌ಎನ್/ಪಿಆರ್/151/2012-13 ರಲ್ಲಿ ಟಿಪ್ಪಣಿ 2 ರ ಕ್ರಮ ಸಂಖ್ಯೆ: 3 ರಲ್ಲಿ ಘನತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರು 5 ಕಾಂಪ್ಯಾಕ್ಟರ್ ಬದಲಾಗಿ ದಿನಾಂಕ 26/04/2012 ರಂದು 3 ಗಂಟೆಗೆ 10 ಗಾಲಿಯ 4 ಟಿಪ್ಪರ್ ಲಾರಿಗಳು, 6 ಗಾಲಿಯ 6 ಟಿಪ್ಪರ್ ಲಾರಿಗಳನ್ನು ಪ್ರದರ್ಶಿಸಲಾಗಿರುತ್ತದೆ. ಘನತ್ಯಾಜ್ಯ ವಿಲೇವಾರಿ ಕಾಮಗಾರಿಗೆ ಅಧೀಕ್ಷಕರ ಅಭಿಯಂತರರು (ಪೂರ್ವ ವಲಯ) ರವರು ದಿನಾಂಕ 18/09/2012 ರಂದು ಟೆಂಡರ್ ನೋಟಿಫಿಕೇಷನ್ ನೀಡಿದ್ದು, ಸದರಿ ಟೆಂಡರ್‌ನ ಬಿಡ್ ಡಾಕ್ಯೂಮೆಂಟ್‌ನ ಪುಟ ಸಂಖ್ಯೆ: 38 ರ ಕ್ರಮ ಸಂಖ್ಯೆ: 4 ರಲ್ಲಿ ಯಂತ್ರೋಪಕರಣಗಳನ್ನು ಒದಗಿಸುವ ಸಂಬಂಧ ಷರತ್ತುಗಳನ್ನು ವಿಧಿಸಿದೆ.
- ಬೆಂಗಳೂರು ನಗರದಲ್ಲಿ ವಿಶೇಷವಾಗಿ ಶಾಂತಿನಗರ ವಿಧಾನ ಸಭಾ ಕ್ಷೇತ್ರದ ಸದರಿ ವಾರ್ಡ್‌ಗಳು ಸೇರಿದಂತೆ ಬಹುತೇಕ ವಾರ್ಡ್‌ಗಳಲ್ಲಿ ಅಧಿಕ ಮಟ್ಟದ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದ ಹಿನ್ನೆಲೆಯಲ್ಲಿ ಹಾಗೂ ಹಾಲಿ ಘನತ್ಯಾಜ್ಯ ವಿಲೇವಾರಿ ಕಾಮಗಾರಿಯನ್ನು ನಿರ್ವಹಿಸುತ್ತಿದ್ದು ಹಾಲಿ ಇದ್ದ ಗುತ್ತಿಗೆದಾರರ ಟೆಂಡರ್ ಅವಧಿಯು ಪೂರ್ಣಗೊಂಡಿದ್ದಿದ್ದರಿಂದ ಸದರಿ ಉಪ ವಿಭಾಗ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ವಾಣಿಜ್ಯ ಸಂಕೀರ್ಣಗಳಿಂದ ದಿನನಿತ್ಯ ಉತ್ಪತ್ತಿಯಾಗುತ್ತಿದ್ದ ತ್ಯಾಜ್ಯವನ್ನು

ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ವಿಲೇವಾರಿ ಮಾಡಲು ಅಗತ್ಯ ಕ್ರಮ ವಹಿಸಿ ಕಾರ್ಯಾದೇಶ ನೀಡಲಾಗಿರುತ್ತದೆ.

ಶಾಂತಿನಗರ ವಿಭಾಗ ಬಿಬಿಎಂಪಿ, ಪೂರ್ವ ವಲಯ ಇಲ್ಲಿ ನವೆಂಬರ್ 2012 ರಿಂದ ಫೆಬ್ರವರಿ 2013 ರವರಿಗೆ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಸದರಿ ಅವಧಿಯಲ್ಲಿ ಪ್ರಮುಖವಾಗಿ ವಿಭಾಗ ವ್ಯಾಪ್ತಿಯಲ್ಲಿ ಬರುವ ಜೋಗ್ ಪಾಳ್ಯ ನಂ.89, ಶಾಂತಲನಗರ ವಾರ್ಡ್ ನಂ.111, ದೊಮ್ಮಲೂರು ವಾರ್ಡ್ ನಂ. 112, ಅಗ್ರಂ ವಾರ್ಡ್ ನಂ.114, ಹೊನ್ನಾರ್ ಪೇಟೆ ವಾರ್ಡ್ ನಂ.115, ನೀಲ್‌ಸಂದ್ರ ವಾರ್ಡ್ ನಂ.116 ಮತ್ತು ಶಾಂತಿನಗರ ವಾರ್ಡ್ ನಂ.117 ರ ಕಾಮಗಾರಿಗಳ ಮೇಲ್ವಿಚಾರಣೆಯ ಜೊತೆಗೆ ಹೆಚ್ಚುವರಿಯಾಗಿ ಕಸ ವಿಲೇವಾರಿಗೆ ಸಂಬಂಧಿಸಿದ ಕಡತದ ಕಾರ್ಯಾದೇಶವನ್ನು ಮಾತ್ರ ವಿತರಿಸಲಾಗಿರುತ್ತದೆ. ಶ್ರೀ. ಡಿ.ಚಂದ್ರಮೋಹನ್ ರವರು ತಮ್ಮ ದೂರಿನಲ್ಲಿ ಪ್ರಮುಖವಾಗಿ ಹಣ ಪಾವತಿಗೆ ಸಂಬಂಧಿಸಿದಂತೆ ದೂರನ್ನು ದಾಖಲಿಸಿದ್ದು, ಸದರಿ ಅವಧಿಯಲ್ಲಿ ನಾನು ಶಾಂತಿನಗರ ವಿಭಾಗ ಇಲ್ಲಿ ಕಾರ್ಯನಿರ್ವಹಿಸಿಲ್ಲ, ಹಣ ಬಿಡುಗಡೆಗೂ ನನಗೂ ಸಂಬಂಧವಿಲ್ಲ, ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

9. 8ನೇ ಎದುರುದಾರರಾದ ಎನ್.ಪಿ.ನಾಗರಾಜ್ ರವರು ದಿನಾಂಕ 16/05/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪೂರ್ವವಲಯ ಶಾಂತಿನಗರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ: 111, ಶಾಂತಲಾ ನಗರ, 116-ನೀಲಸಂದ್ರ ಮತ್ತು 117-ಶಾಂತಿನಗರ ವಾರ್ಡ್‌ಗಳಲ್ಲಿ ಪ್ರತಿದಿನ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ಸಾಗಣೆ) ಮಾಡಲು ಮಾಸಿಕ ಗುತ್ತಿಗೆ ಮೊತ್ತ ರೂ. 47,22,041/- ರಂತೆ ದಿನಾಂಕ 01/01/2013 ರಿಂದ ದಿನಾಂಕ 31/12/2015 ರವರೆಗೆ ಮೆ//ಆರ್.ಕೆ.ಟ್ರಾನ್ಸ್ (ಮಾಲೀಕರು: ಶ್ರೀಮತಿ.ಎಸ್.ವೀಣಾ) ಇವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಈ ಕಾರ್ಯಾದೇಶದಂತೆ, ಮೇಲೆ ತಿಳಿಸಲಾದ ವಾರ್ಡ್‌ಗಳಲ್ಲಿ ಪ್ರತಿ ದಿನ ಘನತ್ಯಾಜ್ಯ ನಿರ್ವಹಣೆ (ಸಂಗ್ರಹಣೆ ಮತ್ತು ಸಾಗಾಣೆ) ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಕಾರ್ಮಿಕರ ಹಾಜರಾತಿ ವಾಹನಗಳ ಲಾಗ್ ಪುಸ್ತಕ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಘನತ್ಯಾಜ್ಯ ನಿರ್ವಹಣೆ ಮಾಡಿದ ಕೆಲಸಕ್ಕೆ ಅನುಗುಣವಾಗಿ ರೂ. 47,22,041/- ಗಳ ಫೆಬ್ರವರಿ 2013 ರಿಂದ ಜೂನ್ 2013 ವರೆಗಿನ ಮಾಹೆಗೆ ಸಂಬಂಧಿಸಿದ ಬಿಲ್ಲುಗಳನ್ನು ಸಂಬಂಧಿಸಿದ ಶಾಖೆಯ ಸಹಾಯಕ ಇಂಜಿನಿಯರ್‌ರವರು ತಯಾರಿಸಿ, ಸಹಾಯಕ ಕಾರ್ಯಪಾಲಕ

ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಶಾಂತಿನಗರ ಉಪ ವಿಭಾಗ, ಬೆಂಗಳೂರು ರವರು ಕಾಮಗಾರಿ ನಡೆದಿರುವ ಬಗ್ಗೆ ಶೇ. 100 ರಷ್ಟು ಪರಿಶೀಲಿಸಿ ನಂತರ ಕಾರ್ಯಪಾಲಕ ಅಭಿಯಂತರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಶಾಂತಿನಗರ ವಿಭಾಗ, ಬೆಂಗಳೂರು ಇವರ ಕಾಮಗಾರಿಯ ಪರಿವೀಕ್ಷಣೆಯ ನಂತರ ಬಿಲ್ಲನ್ನು ಪಾವತಿಸಲು ವಿಭಾಗ ಕಛೇರಿಯ ಲೆಕ್ಕ ಶಾಖೆಗೆ ಸಲ್ಲಿಸಿರುತ್ತಾರೆ. ಮೇಲೆ ತಿಳಿಸಲಾದ ಕಾರ್ಯಾದೇಶದಂತೆ, ಮೆ// ಆರ್.ಕೆ.ಟ್ರಾನ್ಸ್‌ಪೋರ್ಟ್ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪೂರ್ವವಲಯ ಶಾಂತಿನಗರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ:111, ಶಾಂತಲಾ ನಗರ, 116-ನೀಲಸಂದ್ರ ಮತ್ತು 117-ಶಾಂತಿನಗರ ವಾರ್ಡ್‌ಗಳಲ್ಲಿ ನಿರ್ವಹಿಸಲಾದ ಘನತ್ಯಾಜ್ಯ ನಿರ್ವಹಣೆ ಕಾಮಗಾರಿಯ ಕೆಳಕಾಣಿಸಿದ ಬಿಲ್ಲುಗಳನ್ನು ಪಾವತಿಸಲು ಕಾರ್ಯಪಾಲಕ ಅಭಿಯಂತರರು ಬೃಹತ್ ಬೆಂಗಳೂರು ಮಹಾನಗರ ಪಲಿಕೆ, ಶಾಂತಿನಗರ ವಿಭಾಗ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಿರುತ್ತೇನೆ. ಈ ಕಾಮಗಾರಿಯ ಕಾರ್ಮಿಕರಿಗೆ ಸಂಬಂಧಿಸಿದಂತೆ ಇ.ಎಸ್.ಐ ಮತ್ತು ಪಿ.ಎಫ. ವಂತಿಗೆಯ ಮೊತ್ತವನ್ನು ಸಂಬಂಧಿಸಿದ ಇಲಾಖೆಗೆ ಕೆಲಸ ನಿರ್ವಹಿಸಿದ ಮಾಹೆಯ ನಂತರದ ಮಾಹೆಯಲ್ಲಿ ಪಾವತಿಸಬೇಕಾಗಿರುತ್ತದೆ. ಆದರೆ ಗುತ್ತಿಗೆದಾರರು ಇ.ಎಸ್.ಐ ಮತ್ತು ಪಿ.ಎಫ್. ವಂತಿಗೆಯ ಮೊತ್ತವನ್ನು ವಿಳಂಬವಾಗಿ ಪಾವತಿಸಿರುವುದರಿಂದ ಇವರಿಗೆ ದಂಡ ವಿಧಿಸಿ ನಿಯಮಾನುಸಾರ ಶಾಸನಬದ್ಧ ಕಟಾವಣೆಗಳನ್ನು ಮಾಡಿ ಹಣ ಪಾವತಿ ಮಾಡಲಾಗಿರುತ್ತದೆ. ಈ ವಿವರಗಳು ಕೆಳಕಾಣಿಸಿದಂತೆ ಇರುತ್ತದೆ.

| ಕ್ರ. ಸಂ. | ಗುತ್ತಿಗೆ ದಾರರ ಹೆಸರು | ಯಾವ ಮಾಹೆಗೆ ಸಂಬಂಧಿಸಿದ ಬಿಲ್ಲು | ಬಿ.ಆರ್.ಸಂ ಮತ್ತು ದಿನಾಂಕ | ಬಿಲ್ಲಿನ ಮೊತ್ತ | ಶಾಸನ ಬದ್ಧ ಕಡಿತಗಳು | ಪಾವತಿ ನಿವ್ವಳ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಮೆ//ಆರ್.ಕೆ. ಟ್ರಾನ್ಸ್‌ಪೋರ್ಟ್ (ಮಾಲೀಕರು: ಶ್ರೀಮತಿ. ಎನ್. ವೀಣಾ) | 02/2013 | 563/ 30.03.2021 | 47,22,041/- | ಆದಾಯ ತೆರಿಗೆ-95541/-<br>ಕಾರ್ಮಿಕರ ಕ್ಷೇಮ ನಿಧಿ-47500/-<br>ದಂಡ-20000/- | 45,59,000/- |
| 2. | | 03/2013 | 05 29.04.2013 | 47,22,041/- | ಆದಾಯ ತೆರಿಗೆ-94791/-<br>ಕಾರ್ಮಿಕರ ಕ್ಷೇಮ ನಿಧಿ-47250/- | 45,69,000/- |

| | | | | | | |
|---|---|---|---|---|---|---|
| | | | | | ದಂಡ-10000/- | |
| 3. | | 04/2013 | 13/ 03.05.2013 | 47,22,041/- | ಆದಾಯ ತೆರಿಗೆ- 94541/- ಕಾರ್ಮಿಕರ ಕ್ಷೇಮ ನಿಧಿ- 47,250/- ದಂಡ-20,000/- | 45,60,000/- |
| 4. | | 05/2013 | 49/ 24.06.2013 | 47,22,041/- | ಆದಾಯ ತೆರಿಗೆ- 94791/- ಕಾರ್ಮಿಕರ ಕ್ಷೇಮ ನಿಧಿ- 47250/- ದಂಡ-15000/- | 45,65,000/- |
| 5 | | 06/2013 | 52/ 28.06.2013 | 47,22,041/- | ಆದಾಯ ತೆರಿಗೆ- 94791/- ಕಾರ್ಮಿಕರ ಕ್ಷೇಮ ನಿಧಿ- 47250/- ದಂಡ-20000/- | 45,60,000/- |

ಘನತ್ಯಾಜ್ಯ ನಿರ್ವಹಣೆಯನ್ನು ಪ್ರತಿ ದಿನ ನಿರ್ವಹಿಸಿ ಮೇಲೆ ತಿಳಿಸಿದ ವಾರ್ಡ್‌ಗಳಲ್ಲಿ ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕರ ಹಿತ ದೃಷ್ಟಿಯಿಂದ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರ ಆದೇಶದಂತೆ ಮೆ//ಆರ್.ಕೆ.ಟ್ರಾನ್ಸ್‌ಪೋರ್ಟ್ ಇವರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೂಡಿ ಶಾಖೆ ಬೆಂಗಳೂರು ಇಲ್ಲಿ ಇರುವ ಉಳಿತಾಯ ಖಾತೆ ಸಂಖ್ಯೆ: 54025821542, (ಐ.ಎಫ್.ಎಸ್.ಸಿ ಕೋಡ್ ಎಸ್‌ಬಿಎಂವೈ0040391) ಗೆ ಆರ್.ಟಿ.ಜಿ.ಎಸ್ ಮುಖಾಂತರ ಪಾವತಿಸಲಾಗಿರುತ್ತದೆ.

ಘನತ್ಯಾಜ್ಯ ವಸ್ತು ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಮೆಕ್ಯಾನಿಕ್ ಸ್ವೀಪಿಂಗ್ ಯಂತ್ರದ ಬದಲು ಪೌರ ಕಾರ್ಮಿಕರು ಆಟೋ ಮತ್ತು ಲಾರಿಯನ್ನು ಉಪಯೋಗಿಸಿಕೊಂಡು ಕೆಲಸ ನಿರ್ವಹಿಸಲು ಮೆ// ಪವನ್ ಹೌಸ್ ಕೀಪಿಂಗ್ ಅಂಡ್ ಅಲೈಡ್ ಸರ್ವೀಸಸ್ ಬೆಂಗಳೂರು ಇವರಿಗೆ ಕಾರ್ಯಾದೇಶ ಸಂಖ್ಯೆ: 03 ದಿನಾಂಕ 19/03/2013 ರಲ್ಲಿ ವಹಿಸಲಾಗಿರುತ್ತದೆ. ಅದರಂತೆ ಸದರಿ ಸಂಸ್ಥೆಯವರು ದೊಮ್ಮಲೂರು ಫ್ಲೈ ಓವರ್ ನಿಂದ ದೊಮ್ಮಲೂರು ಪ್ರೈಮತಿ ಶಾಲೆಯ ಪೆಟ್ರೋಲ್ ಬಂಕ್‌ನವರೆಗೂ ದಿನಾಂಕ 1903/2013 ರಿಂದ 31/03/2013 ವರೆಗೆ ಕಾರ್ಯಪಾಲಕ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಶಾಂತಿನಗರ ಉಪ-ವಿಭಾಗ, ಬೆಂಗಳೂರು ಇವರು

ತಯಾರಿಸಿ ಕಾರ್ಯಪಾಲಕ ಅಭಿಯಂತರರಿಗೆ ಪಾವತಿಗಾಗಿ ಸಲ್ಲಿಸಿರುತ್ತಾರೆ. ಈ ಬಿಲ್ಲನ್ನು ಪರಿಶೀಲಿಸಿ ಶಾಸನಬದ್ಧ ಕಟಾವಣೆಗಳನ್ನು ಮಾಡಿ ನಿವ್ವಳ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಯಾವ ಮಾಹೆಗೆ ಸಂಬಂಧಿಸಿದ ಬಿಲ್ಲು | ಬಿ.ಆರ್.ಸಂ ಮತ್ತು ದಿನಾಂಕ | ಬಿಲ್ಲಿನ ಮೊತ್ತ | ಶಾಸನ ಬದ್ದ ಕಡಿತಗಳು | ಪಾವತಿ ನಿವ್ವಳ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ಮೆ//ಪವನ್ ಹೌಸ್ ಕೀಪಿಂಗ್ ಅಂಡ್ ಅಲೈಡ್ ಸರ್ವೀಸಸ್ ಬೆಂಗಳೂರು | 03/2013 (19.03.2013 ರಿಂದ 31.03.2013 ವರೆಗೆ) | 16/ 03.05.2013 | 35,609/- | ಆದಾಯ ತೆರಿಗೆ-712/- ಕಾರ್ಮಿಕರ ಕ್ಷೇಮ ನಿಧಿ-356/- | 34540/- |

ಮೊತ್ತವನ್ನು ಮೆ//ಪವನ್ ಹೌಸ್ ಕೀಪಿಂಗ್ ಅಂಡ್ ಅಲೈಡ್ ಸರ್ವೀಸಸ್, ಬೆಂಗಳೂರು ಇವರ ವಿಜಯ ಬ್ಯಾಂಕ್, ವೆಸ್ಟ್ ಆಫ್ ಕಾಡ್ ರೋಡ್ ಶಾಖೆ, ಖಾತೆ ಸಂಖ್ಯೆ: 120100301000457, (ಐ.ಎಫ್.ಎಸ್.ಸಿ.ಕೋಡ್ ವಿಐಜೆಬಿ0001201) ಗೆ ಆರ್.ಟಿ.ಜಿ.ಎಸ್ ಮುಖಾಂತರ ಪಾವತಿಸಲಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪೂರ್ವವಲಯ ಶಾಂತಿನಗರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ:111, ಶಾಂತಲಾ ನಗರ, 116 ನೀಲಸಂದ್ರ ಮತ್ತು 117-ಶಾಂತಿನಗರ ವಾರ್ಡ್‌ಗಳಲ್ಲಿ ಘನತ್ಯಾಜ್ ನಿರ್ವಹಣೆ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸುವಲ್ಲಿ ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ, ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ.

10. 9ನೇ ಎದುರುದಾರರಾದ ಎನ್.ನರಸಿಂಹರಾಜು ರವರು ದಿನಾಂಕ 03/08/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಬಿಬಿಎಂಪಿ ಶಾಂತಿನಗರ ವಿಭಾಗದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರಾಗಿ 19/11/2010 ರಿಂದ 03/06/2014 ರವರೆಗೆ ಸೇವೆ ಸಲ್ಲಿಸಿರುತ್ತೇನೆ. ನಾನು ಶಾಂತಿನಗರ ಉಪವಿಭಾಗದ ಕಸ ವಿಲೇವಾರಿ ಕಾಮಗಾರಿಯ ಗುತ್ತಿಗೆಯನ್ನು ನಿಯಮಾನುಸಾರ ಟೆಂಡರ್ ಪಾರದರ್ಶಕ ನಿಯಮದಂತೆ ಗುತ್ತಿಗೆದಾರರಾದ ಶ್ರೀಮತಿ. ಎಸ್. ವೀಣಾ, ಮೆ. ಆರ್.ಕೆ.ಟ್ರಾನ್ಸ್‌ಪೋರ್ಟ್, ಬೆಂಗಳೂರು ಇವರಿಗೆ ಹಂಚಿಕೆ ಮಾಡಲಾಗಿತ್ತು. ಟೆಂಡರ್ ಪ್ರಕ್ರಿಯೆಯನ್ನು ಜಂಟಿ ಆಯುಕ್ತರು, ಬಿಬಿಎಂಪಿ ಇವರು ಕೂಡ ಅನುಮೋದಿಸಿರುತ್ತಾರೆ. ಬಿಬಿಎಂಪಿ ತಾಂತ್ರಿಕ ವಿಭಾಗದಲ್ಲಿ ಇಂಜಿನಿಯರಿಂಗ್ ಶಾಖೆಯ ಎಲ್ಲಾ ವಿವಿಧ ವೃಂದದ ಇಂಜಿನಿಯರ್‌ಗಳಿಗೆ ವಿಭಾಗ ಮತ್ತು ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳಾದ ರಸ್ತೆ, ಸೇತುವೆ,

ಚರಂಡಿ, ಕಟ್ಟಡ ನಿರ್ವಹಣೆ ಕಟ್ಟಡ ನಕ್ಷ ಇತ್ಯಾದಿ ಕಾಮಗಾರಿಗಳಾಗಿರುತ್ತವೆ. ಈ ಕಾಮಗಾರಿಗಳ ಜೊತೆ ಇಂಜಿನಿಯರಿಂಗ್ ಶಾಖೆಯವರಿಗೆ ಕಸ ವಿಲೇವಾರಿಯ ಉಸ್ತುವಾರಿಯನ್ನೂ ಸಹ ನೀಡಿರುತ್ತಾರೆ. ಶಾಂತಿನಗರ ಉಪವಿಭಾಗದ ಕಸ ಸಾಗಣೆ ಮತ್ತು ಕಸವಿಲೇವಾರಿಗೆ ಟೆಂಡರ್ ಕರೆಯಲು ಆಯುಕ್ತರು ಬಿಬಿಎಂಪಿ ಇವರು ಅನುಮೋದನೆ ನೀಡಿದ್ದು, ಈ ವಿಷಯದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ನನ್ನ ಪಾತ್ರವು ಹೆಚ್ಚಿಗೆ ಇರುವುದಿಲ್ಲ. ದೂರುದಾರರು ನಾನು ಈ ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರ ಎಸಗಿದ್ದೇನೆಂದು ಸಲ್ಲಿಸಿರುವ ದೂರು ಸತ್ಯಕ್ಕೆ ದೂರವಾಗಿರುತ್ತದೆ. ಕಸ ವಿಲೇವಾರಿ ಕೆಲಸವು 30/31 ದಿನಗಳಿಗೆ ನಿಗದಿಯಾಗಿದ್ದು, ಇದನ್ನು ಪರಿಗಣಿಸಿ ಕಸ ವಿಲೇವಾರಿ ಉಸ್ತುವಾರಿಯ ಸಹಾಯಕ ಇಂಜಿನಿಯರ್/ ಕಿರಿಯ ಇಂಜಿನಿಯರುಗಳು ಕಸ ವಿಲೇವಾಡಿ ಮಾಡುವ ಪೌರ ಕಾರ್ಮಿಕರಿಗೆ 30/31 ದಿನಗಳಿಗೆ ಹಾಜರಾತಿಯನ್ನು ನೀಡಿರುತ್ತಾರೆ. ಶ್ರೀಮತಿ. ಎಸ್. ವೀಣಾ. ಮೆ. ಆರ್.ಕೆ.ಟ್ರಾನ್ಸ್‌ಪೋರ್ಟ್, ಬೆಂಗಳೂರು ಇವರು ಕಸ ಸಾಗಾಣಿಕೆಯಲ್ಲಿ ಯಾವುದೇ ತೊಂದರೆ ಮಾಡದೇ ಕಸವನ್ನು ವಿಲೇವಾರಿ ಮಾಡಿದ್ದು, ಶಾಂತಿನಗರ ವಾರ್ಡ್‌ನ ವಿಭಾಗ/ಉಪವಿಭಾಗ ವ್ಯಾಪ್ತಿಯಲ್ಲಿ ಶುಚಿತ್ವವನ್ನು ಕಾಪಾಡಲು ಅನುವು ಮಾಡಿಕೊಟ್ಟಿದ್ದು, ಇದರಿಂದ ಸಾರ್ವಜನಿಕರಿಂದ, ಸ್ಥಳೀಯರಿಂದ, ಕಾರ್ಪೋರೇಟರ್‌ಗಳಿಂದಾಗಲೀ ಮತ್ತು ಶಾಸಕರಿಂದಾಗಲೀ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ಇದಲ್ಲದೇ ಟೆಂಡರ್ ಪ್ರಕ್ರಿಯೆಯಲ್ಲಾಗಲೀ ಹಂಚಿಕೆ, ಟೆಂಡರ್ ವಿಲೇವಾರಿಯಲ್ಲಾಗಲೀ ಯಾವುದೇ ಹಣಕಾಸಿನ ನಷ್ಟ ಉಂಟಾಗಿರುವುದಿಲ್ಲ ಹಾಗೂ ಈ ಕಸ ವಿಲೇವಾರಿಯನ್ನು ಆಯುಕ್ತರು, ಜಂಟಿ ಆಯುಕ್ತರು, ಬಿಬಿಎಂಪಿ ಇವರು ಕೂಡ ಪರಿಶೀಲಿಸಿದ್ದು, ಪರಿವೀಕ್ಷಣಾ ವರದಿಯಲ್ಲಿ ಈ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದಿಲ್ಲ. ಪ್ರಕರಣವನ್ನು ಮುಕ್ತಾಗೊಳಿಸುವಂತೆ ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

11. 10ನೇ ಎದುರುದಾರರಾದ ಸೋಮಶೇಖರ ಜಿ.ಎಲ್ ರವರು ದಿನಾಂಕ 27/07/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ನಾನು ಬಿಬಿಎಂಪಿ ಶಾಂತಿನಗರ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್‌ರಾಗಿ 08/03/2013 ರಿಂದ 31/01/2016 ರವರೆಗೆ ಸೇವೆ ಸಲ್ಲಿಸಿ, ಪ್ರಸ್ತುತ ಬಿಬಿಎಂಪಿ, ರಾಮಮಂದಿರ ಉಪವಿಭಾಗ, ರಾಜಾಜಿನಗರ ಬೆಂಗಳೂರು ಇಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ದೂರುದಾರರು ನೀಡಿರುವ ದೂರಿನಲ್ಲಿ ನನ್ನ ಹೆಸರನ್ನು ನಮೂದಿಸಿಲ್ಲ. ಬಿಬಿಎಂಪಿ ಶಾಂತಿನಗರ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರಾಗಿ ಕೆಲಸ ನಿರ್ವಹಿಸಿದ್ದು, ನಾನು ಮೇಲಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಜಂಟಿ ಆಯುಕ್ತರು ಇವರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸಿರುತ್ತೇನೆ. ನನ್ನ ಕರ್ತವ್ಯದಲ್ಲಿ

ಯಾವುದೇ ಲೋಪವೆಸಗಿರುವುದಿಲ್ಲ. ಟೆಂಡರ್ ಪ್ರಕ್ರಿಯೆ ಇತ್ಯಾದಿ ಪ್ರಕ್ರಿಯೆಗಳನ್ನು ವಿಭಾಗ ಕಛೇರಿಯಲ್ಲಿಯೇ ನಿರ್ವಹಿಸುತ್ತಾರೆ. ದೂರುದಾರರು ತಮ್ಮ ಮೇಲೆ ವಿಧಿಸಿದ ಆಪಾದನೆಗಳಿಗೂ ನನಗೂ ಸಂಬಂಧವಿರುವುದಿಲ್ಲ. ಕೇವಲ ಕಸ ವಿಲೇವಾರಿ ಮಾಡುವ ಪೌರ ಕಾರ್ಮಿಕರಿಗೆ 30/31 ದಿನಗಳ ಹಾಜರಾತಿ ನೀಡಿದ್ದೇನೆಂದು ಆಪಾದಿಸಿ ನನ್ನ ಹೆಸರನ್ನು ಈ ಪ್ರಕರಣದಲ್ಲಿ ನಮೂದಿಸಲಾಗಿದೆ. ಆರೋಗ್ಯ ಪರಿವೀಕ್ಷಕರು ಹಾಜರಾತಿಯನ್ನು ನೀಡಿದ ನಂತರ ನಾನು ಅದನ್ನು ಪ್ರಮಾಣೀಕರಿಸಿರುತ್ತೇನೆ. ಶ್ರೀಮತಿ. ಎಸ್. ವೀಣಾ. ಮೆ. ಆರ್.ಕೆ.ಟ್ರಾನ್ಸ್‌ಪೋರ್ಟ್, ಬೆಂಗಳೂರು ಇವರು ಕಸ ಸಾಗಾಣಿಕೆಯಲ್ಲಿ ಯಾವುದೇ ತೊಂದರೆ ಮಾಡದೇ ಕಸವನ್ನು ವಿಲೇವಾರಿ ಮಾಡಿದ್ದು, ಶಾಂತಿನಗರ ವಾರ್ಡ್‌ನ ವಿಭಾಗ/ಉಪವಿಭಾಗ ವ್ಯಾಪ್ತಿಯಲ್ಲಿ ಶುಚಿತ್ವವನ್ನು ಕಾಪಾಡಲು ಅನುವು ಮಾಡಿಕೊಟ್ಟಿದ್ದು, ಇದರಿಂದ ಸಾರ್ವಜನಿಕರಿಂದ, ಸ್ಥಳೀಯರಿಂದ, ಕಾರ್ಪೋರೇಟರ್‌ಗಳಿಂದಾಗಲೀ ಮತ್ತು ಶಾಸಕರಿಂದಾಗಲೀ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ಈ ಕಸ ವಿಲೇವಾರಿಯನ್ನು ಆಯುಕ್ತರು, ಜಂಟಿ ಆಯುಕ್ತರು, ಬಿಬಿಎಂಪಿ ಇವರು ಕೂಡ ಪರಿಶೀಲಿಸಿದ್ದು, ಪರಿವೀಕ್ಷಣಾ ವರದಿಯಲ್ಲಿ ಈ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದಿಲ್ಲ. ಪ್ರಕರಣವನ್ನು ಮುಕ್ತಾಗೊಳಿಸುವಂತೆ ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

12. 11ನೇ ಎದುರುದಾರರಾದ ಪಿ.ಶ್ರೀನಿವಾಸಲು ರವರು ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ.

13. 12ನೇ ಎದುರುದಾರರಾದ ಎನ್.ಮಾರುತಿ ರವರು ದಿನಾಂಕ 27/09/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಪೌರಕಾರ್ಮಿಕರ ಹಾಜರಿಯನ್ನು ಪುಸ್ತಕದಲ್ಲಿ ಬರೆದು ತಿಂಗಳ ಕೊನೆಯಲ್ಲಿ ಹಾಜರಾತಿ ದೃಢೀಕರಣವನ್ನು ಮಾಡಿ ಅದನ್ನು ಸಹಾಯಕ ಇಂಜಿನಿಯರ್ ಅವರಿಗೆ ಸಲ್ಲಿಸಲಾಗುತ್ತದೆ. ತದನಂತರ ಆ ಕಡತವು ನನ್ನ ಅವಗಾಹನೆಗೆ ಬರುವುದಿಲ್ಲ. ಆದ್ದರಿಂದ ಗುತ್ತಿಗೆದಾರರು ಪೌರಕಾರ್ಮಿಕರಿಗೆ ಎಷ್ಟು ಹಣ ಪಾವತಿಸಿದ್ದಾರೆ ಎನ್ನುವ ವಿಚಾರ ನನ್ನ ಅವಗಾಹನೆಗೆ ಬರುವುದಿಲ್ಲ. ಅದರ ಪರಿವೀಕ್ಷಣೆ ನನ್ನ ಜವಾಬ್ದಾರಿಯಲ್ಲಿ ಬರುವುದಿಲ್ಲ. ಈ ಹಾಜರಾತಿ ವ್ಯತ್ಯಾಸಗಳು ನನ್ನ ಗಮನಕ್ಕೆ ಬಾರದೇ ಇರುವುದರಿಂದ ಈ ಆರೋಪಗಳು ಸುಳ್ಳು ಎಂದು ನಿರಾಕರಿಸುತ್ತೇನೆ. ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

14. 13ನೇ ಎದುರುದಾರರಾದ ಎಸ್.ಅಣ್ಣಪ್ಪ ರವರು ದಿನಾಂಕ 27/09/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಪೌರಕಾರ್ಮಿಕರ ಹಾಜರಿಯನ್ನು ಪುಸ್ತಕದಲ್ಲಿ ನಮೂದಿಸಿ ತಿಂಗಳ

ಕೊನೆಯಲ್ಲಿ ಹಾಜರಾತಿ ದೃಢೀಕರಣವನ್ನು ಮಾಡಿ ಸಹಾಯಕ ಇಂಜಿನಿಯರ್ ಅವರಿಗೆ ಸಲ್ಲಿಸುತ್ತೇನೆ. ನಂತರ ಆ ಕಡತವು ನನಗೆ ಬರುವುದಿಲ್ಲ, ಆದ್ದರಿಂದ ಗುತ್ತಿಗೆದಾರರು ಪೌರಕಾರ್ಮಿಕರಿಗೆ ಎಷ್ಟು ಹಣ ಪಾವತಿಸಿದ್ದಾರೆ ಎನ್ನುವ ವಿಚಾರ ನನ್ನ ಗಮನಕ್ಕೆ ಬರುವುದಿಲ್ಲ. ಪೌರಕಾರ್ಮಿಕರು ತನಿಖಾಧಿಕಾರಿಗಳಿಗೆ ಅವರು ಹಾಜರಿಲ್ಲದ ಬಗ್ಗೆ ಹೇಳಿಕೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

15. 14ನೇ ಎದುರುದಾರರಾದ ಟಿ.ಸೆಲ್ವರಾಜ್ ರವರು ದಿನಾಂಕ 27/09/2018 ರಂದು ತಮ್ಮ ತಕರಾರನ್ನು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ, ಪೌರಕಾರ್ಮಿಕರ ಹಾಜರಿಯನ್ನು ಪುಸ್ತಕದಲ್ಲಿ ಬರೆಯುತ್ತೇನೆ, ತಿಂಗಳ ಕೊನೆಯಲ್ಲಿ ಹಾಜರಾತಿ ದೃಢೀಕರಣವನ್ನು ಮಾಡಿ ಸಹಾಯಕ ಇಂಜಿನಿಯರ್ ಅವರಿಗೆ ಸಲ್ಲಿಸುತ್ತೇನೆ. ನಂತರ ಕಡತವು ನನ್ನ ಗಮನಕ್ಕೆ ಬರುವುದಿಲ್ಲ. ಪೌರಕಾರ್ಮಿಕರ ಹಾಜರಾತಿಯನ್ನು ಯತಾವತ್ತಾಗಿ ದಾಖಲಿಸಿದ್ದೇನೆ. ಪೌರಕಾರ್ಮಿಕರು ತನಿಖಾಧಿಕಾರಿಗಳಿಗೆ ಅವರು ಹಾಜರಿಲ್ಲದ ಬಗ್ಗೆ ಹೇಳಿಕೆ ನೀಡಿರುವುದಿಲ್ಲ ಎಂದು ಹೇಳಿರುತ್ತಾರೆ ಹಾಗೂ ಪ್ರಕರಣದಿಂದ ಕೈ ಬಿಡುವಂತೆ ಕೋರಿರುತ್ತಾರೆ ಹಾಗೂ ಸೇವಾ ವಿವರಗಳನ್ನು ಸಲ್ಲಿಸಿರುತ್ತಾರೆ.

16. ತನಿಖಾಧಿಕಾರಿ ರವರಾದ ಲಕ್ಷ್ಮಯ್ಯ ಟಿ., ಉಪ ನಿಯಂತ್ರಕರು (ಲೆಕ್ಕ ಪತ್ರ), ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ದಿನಾಂಕ 14/11/2017 ರಂದು ತಮ್ಮ ವರದಿಯನ್ನು ಸಲ್ಲಿಸಿದ್ದು ತಮ್ಮ ವರದಿಯಲ್ಲಿ,

a) ದೂರುದಾರರಾದ ಡಿ.ಚಂದ್ರಮೋಹನ್ ರವರು ದಿನಾಂಕ 11/02/2016 ರಂದು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ದೂರನ್ನು ಸಲ್ಲಿಸಿ ಬಿಬಿಎಂಪಿ ಶಾಂತಿನಗರ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಮೋಹನ್‌ದಾಸ್, ಶಾಂತಿನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಚಂದ್ರಪ್ಪ (ಚಂದ್ರಯ್ಯ) ಶಾಂತಿನಗರ ಉಪವಿಭಾಗದ ಶಾಂತಲನಗರ ವಾರ್ಡ್ ಸಂಖ್ಯೆ 111 ರ ಸಹಾಯಕ ಅಭಿಯಂತರರಾದ ಸತೀಶ್, ಶಾಂತಿನಗರ ವಿಭಾಗದ ಸಯ್ಯದ್ ಸಬೀರ್ ಆಲಿ ಅಕೌಂಟ್ ಸೂಪರಿಟೆಂಡೆಂಟ್ ಇವರು ಕಡ ಸಾಗಣೆ ಮಾಡುವ ವಿಷಯವಾಗಿ ಬಾರಿ ಭ್ರಷ್ಟಾಚಾರ ಮಾಡಿ ಬಿಬಿಎಂಪಿ ಹಣ ದುರುಪಯೋಗ ಮಾಡಿರುವರೆಂದು ಆಪಾದನೆ ಮಾಡಿರುತ್ತಾರೆ.

b) ಸದರಿ ಆಪಾದನೆಗೆ ಸಂಬಂಧಿಸಿದಂತೆ ದೂರುದಾರರು ದೂರಿನೊಂದಿಗೆ ಸಲ್ಲಿಸಿರುವ ದಾಖಲೆಗಳನ್ನು ಎದುರುದಾರರುಗಳು ಕರ್ನಾಟಕ ಲೋಕಾಯುಕ್ತ ನಗರ ವಿಭಾಗದ ಪೋಲೀಸ್ ಉಪಾಧೀಕ್ಷಕರಾದ

ಶ್ರೀ. ಎನ್.ಎಂ.ಧರ್ಮಪ್ಪನವರಿಗೆ ಸಲ್ಲಿಸಿರುವ ಹೇಳಿಕೆ ಮತ್ತು ದಾಖಲೆಗಳನ್ನು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಲೆಕ್ಕ ಪರಿಶೋಧಕರಿಂದ ಪಡೆದಿರುವ ಶಾಂತಿನಗರ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಛೇರಿಯ 2012-13 ಮತ್ತು 2013-14 ಸಾಲುಗಳ ಲೆಕ್ಕ-ಪರಿಶೋಧನಾ ವರದಿಗಳ ದೃಢೀಕೃತ ಪ್ರತಿಗಳನ್ನು ಮತ್ತು ಶಾಂತಿನಗರ ವಿಭಾಗ ಕಛೇರಿಯಿಂದ ಪಡೆದಿರುವ ಕಡತ ಮತ್ತು ದಾಖಲೆಗಳನ್ನು ತನಿಖೆಯಲ್ಲಿ ಪರಿಶೀಲಿಸಿ ಕಂಡುಬಂದ ಅಂಶಗಳನ್ನು ವಿವರವಾಗಿ ಕಂಡಿಕೆ(4) ರಲ್ಲಿ ತಿಳಿಸಲಾಗಿದೆ.

c) ದೂರಿನಲ್ಲಿ ತಿಳಿಸಿರುವ ಎದುರುದಾರರುಗಳು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 15 (1) (2) (3) ಅನುಚ್ಛೇದ-16 ಅನುಚ್ಛೇಧ-341 ಇವುಗಳನ್ನು, ಕೆಟಿಪಿಪಿ ನಿಯಮ 24, ನಿಯಮ 26(1) ಕರ್ನಾಟಕ ಪುರಸಭೆಗಳ ಲೆಕ್ಕ ಪದ್ಧತಿ ಮತ್ತು ಆಯವ್ಯಯ ನಿಯಮಗಳು 2006 ರ ನಿಯಮ 37 (4) (5) (6) ಇವುಗಳನ್ನು, ಟೆಂಡರ್ ಷರತ್ತುಗಳನ್ನು ಮತ್ತು ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಒಪ್ಪಂದ/ಕರಾರು ದಿನಾಂಕ 13/11/2012 ರಲ್ಲಿನ ಷರತ್ತುಗಳನ್ನು ಮತ್ತು ಬಿಬಿಎಂಪಿ ಶಾಂತಿನಗರ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಾರ್ಯಾದೇಶ ಪತ್ರ ದಿನಾಂಕ 14/12/2012 ರಲ್ಲಿನ ಸೂಚನೆಗಳನ್ನು ಪಾಲಿಸದೇ ಕರ್ತವ್ಯಲೋಪ ಮಾಡಿರುತ್ತಾರೆ.

- ಟೆಂಡರ್ ನೋಟಿಫೀಕೇಷನ್ ನಂ. SE(E)SWM/REND/04/E-13/12-13 ರ ಟೆಂಡರ್ ಕಂಡಿಷನ್ ಶೆಡ್ಯೂಲ್-3 ರ ಪ್ರಕಾರ ಸಾಮಗ್ರಿ/ವಾಹನಗಳನ್ನು ಪ್ರದರ್ಶನ ಮಾಡಬೇಕಾಗಿದ್ದು ಗುತ್ತಿಗೆದಾರರ ಶ್ರೀಮತಿ ವೀಣಾ ಎಸ್. ಅವರು ದಿನಾಂಕ 26/11/2012 ರಂದು 3 ಗಂಟೆಗೆ ಐದು ಕಾಂಪ್ಯಾಕ್ಟರ್‌ಗಳನ್ನು ಪ್ರದರ್ಶನ ಮಾಡದೇ ಕಾಂಪ್ಯಾಕ್ಟರ್‌ಗೆ ಬದಲಾಗಿ ಟಿಪ್ಪರ್ ಲಾರಿಗಳನ್ನು ಪ್ರದರ್ಶಿಸಿರುತ್ತಾರೆ. ಆದರೆ, ಗುತ್ತಿಗೆದಾರರಾದ ಶ್ರೀಮತಿ ವೀಣಾ. ಎಸ್.ಆರ್.ಕೆ. ಟ್ರಾನ್ಸ್‌ಪೋರ್ಟ್ ಎಲ್1 ಆಗಿದ್ದು ಅತಿ ಕಡಿಮೆ ದರಗಳನ್ನು ನಮೂದಿಸಿರುವುದರಿಂದ ಮತ್ತು ಅವಶ್ಯ ವಾಹನಗಳನ್ನು ಮತ್ತು ಸಾಮಗ್ರಿಗಳನ್ನು ದಾಖಲೆ ಪ್ರಕಾರ ಹಾಜರುಪಡಿಸಿರುವುದರಿಂದ ಸದರಿಯವರಿಗೆ ಕರಾರು ಮಾಡಿಕೊಂಡು ಕಾರ್ಯಾದೇಶ ನೀಡಲು ಅನುಮತಿ ಕೋರಿ ಬಿಬಿಎಂಪಿ ವಾರ್ಡ್ ಸಂಖ್ಯೆ: 116 ರ ಸಹಾಯಕ ಅಭಿಯಂತರರಾದ ಡಿ.ಮೂರ್ತಿ, ವಾಡ್ ಸಂಖ್ಯೆ: 111 ರ ಸಹಾಯಕ ಅಭಿಯಂತರರಾದ ಪಿ.ವನರಾಜ್ ಹಾಗೂ ಚಂದ್ರಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರು ಶಾಂತಿನಗರ ಉಪ ವಿಭಾಗ ಇವರುಗಳು ಕಾರ್ಯಪಾಲಕ ಅಭಿಯಂತರರಾದ ಬಿ.ಎಸ್. ಮುಕುಂದ್ ಅವರಿಗೆ ಸಲ್ಲಿಸಿದ್ದು, ಟೆಂಡರ್ ಷರತ್ತುಗಳನ್ನು ಪರಿಶೀಲಿಸಿದೇ ಅನುಮೋದಿಸಿ ಇವರುಗಳು ಕೆಟಿಪಿಪಿ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯಲೋಪ ಮಾಡಿರುತ್ತಾರೆ.
- ಪ್ಯಾಕೇಜ್ ಇ-13 ವಾರ್ಡ್ ಸಂಖ್ಯೆ 111, 116, 117 ಕ್ಕೆ ಸಂಬಂಧಿಸಿದಂತೆ ಮೇ-2013 ರ ಮಾಹೆಯ ಬಿಲ್ಲಿನಲ್ಲಿ ದಿನಾಕ 01/05/2013 ರಿಂದ ದಿನಾಂಕ 31/05/2013 ರ ವರೆಗೆ ರೂ.

47,22,041/- ಗಳನ್ನು ಸಾದಿಲ್ವಾರು ಬಿಲ್ ಸಂಖ್ಯೆ ಬಿ.ಆರ್. 43/24-06-2013 ರಲ್ಲಿ ಪಾವತಿಸಿದ್ದು ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಚಂದ್ರಯ್ಯನವರು ಮೇಲುರುಜು ಮಾಡಿದ್ದು ಲೆಕ್ಕ ಪತ್ರ ಅಧೀಕ್ಷಕರಾದ ಎನ್.ಬಿ. ನಾಗರಾಜು ಅವರು ಲೆಕ್ಕ ಪರಿಶೋಧನೆ ಮಾಡಿದ್ದು, ಕಾರ್ಯಪಾಲಕ ಅಭಿಯಂತರರಾದ ನರಸಿಂಹರಾಜು ಅವರು ಪಾವತಿಗೆ ಅಂಗೀಕರಿಸಿರುತ್ತಾರೆ. ಪ್ಯಾಕೇಜ್ ಇ-13 ವಾರ್ಡ್ ನಂ. 111 ರ ಮೇ-2013ನೇ ಮಾಹೆಯ ಪೌರಕಾರ್ಮಿಕರ ಹಾಜರಾತಿ ಪಟ್ಟಿಯಲ್ಲಿ ಉದಾಹರಣೆಗೆ ಕ್ರ.ಸಂ. 20 ಮತ್ತು 22ರಲ್ಲಿನ ಪೌರಕಾರ್ಮಿಕರಿಗೆ 31 ದಿನಗಳ ಹಾಜರಾತಿಯನ್ನು ಸಹಾಯಕ ಅಭಿಯಂತರರಾದ ಶ್ರೀ. ಡಿ. ಸತೀಶ್ ರವರು ನೀಡಿದ್ದು ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಚಂದ್ರಯ್ಯ ನವರು ದೃಢೀಕರಿಸಿದ್ದು, ಗುತ್ತಿಗೆದಾರರು ಮೇ-2013 ರ ವೇತನ ಪಾವತಿಸಿರುವ ತಃಖ್ತೆಯ ಪ್ರಕಾರ ಕ್ರ.ಸಂ. 20 ರ ಕಾರ್ಮಿಕರಿಗೆ 23 ದಿನಗಳ ವೇತನವನ್ನು ಕ್ರ.ಸಂ. 22 ಕಾರ್ಮಿಕರಿಗೆ 27 ದಿನಗಳ ವೇತನವನ್ನು ಪಾವತಿಸಲಾಗಿದೆ. ಈ ವ್ಯತ್ಯಾಸದಿಂದ ಹಾಜರಾತಿ ವಿವರಗಳನ್ನು ಬಿಬಿಎಂಪಿ ಅಧಿಕಾರಿಗಳು ಸರಿಯಾಗಿ ನಿರ್ವಹಿಸದೇ ಸುಳ್ಳು ಹಾಜರಿ ನೀಡಲಾಗಿದೆ. ಈ ಸಂಬಂಧ ಬಿಲ್ಲನ್ನು ಲೆಕ್ಕಾಧೀಕ್ಷಕರಾದ ಎನ್.ಬಿ.ನಾಗರಾಜು ಲೆಕ್ಕ ಪರಿಶೋಧನೆ ಮಾಡಿದ್ದು, ಕಾರ್ಯಪಾಲಕ ಅಭಿಯಂತರರಾದ ನರಸಿಂಹರಾಜು ರವರು ಹಣ ಪಾವತಿಗೆ ಅಂಗೀಕರಿದ್ದು ಹಾಜರಾತಿಯನ್ನು ಖಚಿತಪಡಿಸಿಕೊಳ್ಳದೇ ಹಣ ಪಾವತಿಸಲಾಗಿದ್ದು ಈ ಎಲ್ಲಾ ಅಧಿಕಾರಿಗಳು ಕರ್ತವ್ಯಲೋಪ ಮಾಡಿರುತ್ತಾರೆ.

d) ಆರ್.ಕೆ.ಟ್ರಾನ್ಸ್‌ಪೋರ್ಟ್ ಬೆಂಗಳೂರು-48 ಅವರು ಬಿಬಿಎಂಪಿ ಶಾಂತಿನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರಿಗೆ ಸಲ್ಲಿಸಿರುವ ಘನತ್ಯಾಜ್ಯ ವಸ್ತು ನಿರ್ವಹಣೆ ಮಾಸಿಕ ಬಿಲ್ಲುಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಮಾಹೆ | ಇನ್‌ವಾಯ್ಸ್/ ನಗದು ಬಿಲ್ಲು ಸಂಖ್ಯೆ ಮತ್ತು ದಿನಾಂಕ | ಮೊಬಲಗು |
|---|---|---|---|
| 1 | 2 | 3 | 4 |
| 1 | ಫೆಬ್ರವರಿ-2013 | 136/5-3-3013 | 4722041-00 |
| 2 | ಮಾರ್ಚ್-2013 | 347/1-4-2013 | 4722041-00 |
| 3 | ಏಪ್ರೀಲ್-2013 | 348/2-5-2013 | 4722041-00 |
| 4 | ಮೇ-2013 | 349/1-6-2013 | 4722041-00 |
| 5 | ಜೂನ್-2013 | 350/1-7-2013 | 4722041-00 |
| 6 | ಜುಲೈ-2013 | 351/1-8-2013 | 4722041-00 |

ಈ ಮೇಲೆ ತಿಳಿಸಿರುವ ಆರ್.ಕೆ.ಟ್ರಾನ್ಸ್‌ಪೋರ್ಟ್‌ನ ಬಿಲ್ಲುಗಳ ಮೇಲೆ ವಾರ್ಡ್ ಸಂಖ್ಯೆ 111 ಶಾಂತಲನಗರ ಸಹಾಯಕ ಅಭಿಯಂತರರಾಗಿದ್ದ ಡಿ.ಸತೀಶ್, ವಾರ್ಡ್ ಸಂಖ್ಯೆ 116-ನೀಲಸಂದ್ರದ ಸಹಾಯಕ ಅಭಿಯಂತರರಾದ ಡಿ.ಮೂರ್ತಿ ಮತ್ತು ವಾರ್ಡ್ ಸಂಖ್ಯೆ 117 ರ ಸಹಾಯಕ ಅಭಿಯಂತರರಾಗಿದ್ದ ಜಿ.ಎಲ್. ಸೋಮಶೇಖರ್ ರವರುಗಳು 4 ದೃಢೀಕರಣಗಳನ್ನು ದೃಢೀಕರಿಸಿದ್ದು ಹಾಜರಾತಿಯ ವರದಿಯಂತೆ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಸಹಾಯಕ ಅಭಿಯಂತರರುಗಳು ನೀಡಿರುವ ಹಾಜರಾತಿ ವರದಿಗಳಲ್ಲಿ ಹಾಜರಾದ ದಿನಗಳಿಗೂ ಗುತ್ತಿಗೆದಾರರು ಕೂಲಿ/ವೇತನ ಪಾವತಿ ಮಾಡಿರುವ ದಿನಗಳಿಗೂ ವ್ಯತ್ಯಾಸವಿದ್ದು ಸುಳ್ಳು ಹಾಜರಾತಿಯನ್ನು ದಾಖಲಿಸಿರುವುದು ತನಿಖೆಯಲ್ಲಿ ಸಾಬೀತಾಗಿದೆ. ವಾರ್ಡ್ ಸಂಖ್ಯೆ 111ರ ಕಿರಿಯ ಆರೋಗ್ಯ ಪರಿವೀಕ್ಷಕರಾದ ಪಿ. ಶ್ರೀನಿವಾಸುಲು ವಾರ್ಡ್ ಸಂಖ್ಯೆ 116 ರ ಕಿರಿಯ ಆರೋಗ್ಯ ಪರಿವೀಕ್ಷಕರಾದ ಎನ್.ಮಾರುತಿ, ವಾರ್ಡ್ ಸಂಖ್ಯೆ 117 ರ ಹಿರಿಯ ಆರೋಗ್ಯ ಪರಿವೀಕ್ಷಕರಾದ ಅಣ್ಣಯ್ಯಪ್ಪ, ಕಿರಿಯ ಆರೋಗ್ಯ ಪರಿವೀಕ್ಷಕರಾದ [illegible] ಸಹ ಹಾಜರಾತಿಯನ್ನು ದೃಢೀಕರಿಸಿ ಕರ್ತವ್ಯಲೋಪ ಮಾಡಿರುತ್ತಾರೆ. ಇವರು ದೃಢೀಕರಿಸಿರುವುದನ್ನು ಒಪ್ಪಿಕೊಂಡು ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಚಂದ್ರಯ್ಯನವರು ಬಿಲ್ಲುಗಳನ್ನು ಹಾಗೂ ಪೂರಕ ದಾಖಲೆಗಳನ್ನು ಕಾರ್ಯಪಾಲಕ ಅಭಿಯಂತರರಾಗಿದ್ದ ನರಸಿಂಹರಾಜು ಅವರಿಗೆ ಕಳುಹಿಸಿದ್ದು, ಅವರು ಸಾದಿಲ್ವಾರು ಬಿಲ್ಲಿನಲ್ಲಿ ಕ್ಲೈಮು ಮಾಡಿದ್ದು, ಲೆಕ್ಕ ಅಧೀಕ್ಷಕರಾಗಿದ್ದ ಎನ್.ಪಿ.ನಾಗರಾಜು ಮತ್ತು ಸಯ್ಯದ್ ಸಬೀರ್ ಅಲಿ ಇವರುಗಳು ಟೆಂಡರ್ ನಿಬಂಧನೆಗಳು, ಅಗ್ರಿಮೆಂಟ್ ಷರತ್ತು ಮತ್ತು ಕಾರ್ಯಾದೇಶ ಪತ್ರ ದಿನಾಂಕ 14/12/2012 ರ ಸೂಚನೆಗಳನ್ನು ಪಾಲಿಸದೆ ಗುತ್ತಿಗೆದಾರರಿಗೆ ಹಣವನ್ನು ಪಾವತಿಸಿ ಕರ್ತವ್ಯಲೋಪ ಮಾಡಿರುತ್ತಾರೆ. ಕರ್ತವ್ಯಲೋಪ ಮಾಡಿರುತ್ತಾರೆ. ಕರ್ತವ್ಯಲೋಪ ಮಾಡಿರುವ ಎಲ್ಲಾ ನೌಕರರು ಮತ್ತು ಅಧಿಕಾರಿಗಳ ನಿವೃತ್ತಿ ದಿನಾಂಕವನ್ನು ತಿಳಿಸುವಂತೆ ದೂರವಾಣಿ ಮೂಲಕ ಶಾಂತಿನಗರ ವಿಭಾಗ ಕಛೇರಿಯನ್ನು ಸಂಪರ್ಕಿಸಿ ಕೇಳಲಾಗಿದ್ದು ಅವರು ಮಾಹಿತಿಯನ್ನು ನೀಡಿರುವುದಿಲ್ಲ. 1ನೇ ಎದುರುದಾರರಾದ ಮೋಹನ್‌ದಾಸ್, ಕಾರ್ಯಪಾಲಕ ಅಭಿಯಂತರರು ದಿನಾಂಕ 19/06/2014 ರಿಂದ ಶಾಂತಿನಗರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದಾಗಿ ಅವರ ಹೇಳಿಕೆ ದಿನಾಂಕ 30/08/2016 ರಲ್ಲಿ ತಿಳಿಸಿರುವುದರಿಂದ ಇವರು ದೂರಿನಲ್ಲಿ ತಿಳಿಸಿರುವ ಕಸ ಸಾಗಣೆ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ. ಆದ್ದರಿಂದ ಕರ್ತವ್ಯಲೋಪ ಮಾಡಿರುವ ಉಳಿದ ನೌಕರರು ಮತ್ತು ಅಧಿಕಾರಿಗಳ ಮೇಲೆ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಬಹುದೆಂದು ತನಿಖೆಯಲ್ಲಿ ಅಭಿಪ್ರಾಯಪಡಲಾಗಿದೆ.

- ಬಿಬಿಎಂಪಿ ಶಾಂತಿನಗರ ವಿಭಾಗದಿಂದ ಪಡೆದಿರುವ ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ: ಕಾ.ಅ(ಶಾ.ನ)/ಪಿ.ಆರ್/56/16-17 ದಿನಾಂಕ 05/08/2016 ರ ಫೋಟೋ ಪ್ರತಿ ಮತ್ತು ಪೂರಕ ದಾಖಲೆಗಳನ್ನು, (2) ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ಗುತ್ತಿಗೆ ಕರಾರು ನೀಡುವ ಬಗ್ಗೆ ಇರುವ ಮೂಲ ಕಡತ ಸಂಖ್ಯೆ: ಎಇಇ/ಎಸ್‌ಎನ್/ಪಿಆರ್/151/12-13

ದಿನಾಂಕ 10/12/2012 (ಟಿಪ್ಪಣಿ ಹಾಳೆಗಳು 1-5 ಪುಟ ಪತ್ರ ವ್ಯವಹಾರ್ ಪುಟಗಳು 1 ರಿಂದ 29 ಪುಟಗಳು), ಗುತ್ತಿಗೆದಾರರು ಸಲ್ಲಿಸಿರುವ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ದೂರುದಾರರ ಉತ್ತರ ದಿನಾಂಕ 31/10/2017 ಮತ್ತು ಬಿಬಿಎಂಪಿ ಮುಖ್ಯ ಲೆಕ್‌ಪರಿಶೋಧಕರ ಪತ್ರ ಸಂಖ್ಯೆಳ ಮುಲೆಪ/ಲೆಪ/ಕಾಮಗಾರಿ/2017-18/573 ದಿನಾಂಕ 30/10/2017 ರಲ್ಲಿ ಪಡೆದಿರುವ 2012-13 ಮತ್ತು 2013-14 ನೇ ಸಾಲಿನ ಲೆಕ್ಕ-ಪರಿಶೋಧನಾ ವರದಿಗಳನ್ನು ಈ ತನಿಖಾ ವರದಿಯೊಂದಿಗೆ ಮಾಹಿತಿಗಾಗಿ ಲಗತ್ತಿಸಿ ಸಲ್ಲಿಸಲಾಗಿದೆ.

e) ದೂರುದಾರರು ದೂರಿನಲ್ಲಿ ಕಾಮಗಾರಿಗಳನ್ನು ಮಾಡದೇ ಕಳ್ಳ ಬಿಲ್ಲುಗಳನ್ನು ಸೃಷ್ಟಿಸಿ ಹಣ ಲೂಟಿ ಮಾಡಿರುತ್ತಾರೆ ಎಂದು ಆಪಾದನೆಗಳನ್ನು ಮಾಡಿದ್ದು, ಈ ಬಗ್ಗೆ ಈಗಾಗಲೇ ಪತ್ರ ವ್ಯವಹಾರ ಮಾಡಿರುವ ಕಾರ್ಯಪಾಲಕ ಇಂಜಿನಿಯರ್-1 ಹಾಗೂ ತನಿಖಾಧಿಕಾರಿಗಳು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ಅವರಿಂದ ವರದಿಯನ್ನು ಪಡೆಯಬಹುದಾಗಿದೆ ಎಂದು ಹೇಳಿರುತ್ತಾರೆ.

17. ತನಿಖಾಧಿಕಾರಿಗಳು ಹೆಚ್.ಎಸ್.ಸುಧೀಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರು -2 ರವರು ದಿನಾಂಕ 30/12/2017ರಂದು ತಮ್ಮ ವರದಿಯನ್ನು ಸಲ್ಲಿಸಿದ್ದು, ಈ ಕೆಳಕಂಡಂತಿದೆ,

"ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ, ಈ ಕಾಮಗಾರಿಗಳ ಸ್ಥಳ ತನಿಖೆ ಮತ್ತು ದಾಖಲೆಗಳ ಪರಿಶೀಲನೆಯನ್ನು ಕೈಗೊಳ್ಳಲು ದಿನಾಂಕ 28 & 29/11/2017ಕ್ಕೆ ಕ್ರಾರ್ಯಕ್ರಮ ನಿಗದಿಗೊಳಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರಮುಖೇನ ತಿಳಿಸಲಾಗಿರುತ್ತದೆ. ದಿನಾಂಕ 28/11/2017ರಂದು ನಡೆಸಿದ ಕಾಮಗಾರಿಗಳ ಪರಿಶೀಲನೆಯ ಸಂದರ್ಭದಲ್ಲಿ ಕೆಳಕಂಡ ಬಿಬಿಎಂಪಿ ಅಧಿಕಾರಿಗಳು ಹಾಜರಿರುತ್ತಾರೆ:

ಶ್ರೀಯುತರಾದ

ಎಚ್.ಟಿ.ಮೋಹನ್ ದಾಸ್ - ಕಾರ್ಯಪಾಲಕ ಇಂಜಿನಿಯರ್
ಬಿ.ಎಂ.ಧರಣೇಂದ್ರ ಕುಮಾರ್ - ಕಾರ್ಯಪಾಲಕ ಇಂಜಿನಿಯರ್
ಎಸ್.ಮಂಜುನಾಥರೆಡ್ಡಿ - ಕಾರ್ಯಪಾಲಕ ಇಂಜಿನಿಯರ್
ಎಚ್.ಚಂದ್ರಯ್ಯ - ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಬಿ.ಎಂ.ಕೃಷ್ಣಮೂರ್ತಿ - ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಕೆ.ಪಿ.ಶಾಂತೇಗೌಡ - ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಡಿ.ಸತೀಶ್ ಮತ್ತು ಎಂ.ಪ್ರದೀಪ್ ಕುಮಾರ್ - ಶಾಖಾಧಿಕಾರಿಗಳು

ಮೇಲೆ ಪಟ್ಟಿಮಾಡಿರುವ ಸಮಕ್ಷಮದಲ್ಲಿ, ಈ ದೂರುಪ್ರಕರಣಕ್ಕೆ ಸಂಬಂಧಿಸಿರುವ 11 ಕಾಮಾಗಾರಿಗಳನ್ನು ದಿನಾಂಕ 28.11.2017ರಂದು ಪರಿಶೀಲಿಸಲಾಗಿದ್ದು, ಅವುಗಳ ವಿವರಗಳನ್ನು ಮಹಜರ್‌ನೊಂದಿಗೆ ಸಲ್ಲಿಸಲಾಗಿರುತ್ತದೆ. ಹೀಗೆ ಪರಿಶೀಲನೆಯನ್ನು ಆರಂಭಿಸುವ ಮೊದಲಿಗೆ ನಡೆಸಿದ ವಿಚಾರಣೆಯ ಸಂದರ್ಭದಲ್ಲಿ, ಎದುರುದಾರ ಅಧಿಕಾರಿಗಳು ದಾಖಲೆಗಳನ್ನು ಹಾಜರುಪಡಿಸಿ, ತನಿಖೆಯ ಸಂದರ್ಭದಲ್ಲಿ ವಿವರಿಸಿದಂತೆ ಆಪಾದಿತ ಕಾಮಗಾರಿಗಳನ್ನು 2003 ಮತ್ತು 2004ರಲ್ಲಿ ನಿರ್ವಹಿಸಲಾಗಿರುತ್ತದೆ. ಸದರಿ ಕಾಮಗಾರಿಗಳು ಯಾವುದೇ ರೀತಿಯ ಅಭಿವೃದ್ಧಿ ಅಥವಾ ಹೊಸದಾಗಿ ಕೈಗೆತ್ತಿಕೊಂಡಿರುವ ಬೃಹತ್ ಕಾಮಗಾರಿಗಳಾಗದೇ ಸಣ್ಣ-ಪುಟ್ಟ (ಗರಿಷ್ಟ ರೂ.398 ಲಕ್ಷ ಕನಿಷ್ಟ ರೂ.95,723 ವೆಚ್ಚದ) ವಾರ್ಷಿಕ ನಿರ್ವಹಣೆ ಸ್ವರೂಪದಲ್ಲಿ (ಅಂದರೆ ಕಾಮಗಾರಿಗಳ ಸ್ವರೂಪಕ್ಕೆ ಅನುಗುಣವಾಗಿ ಒಂದು ಅಥವಾ ಎರಡು ವರ್ಷಕ್ಕೊಮ್ಮೆ Annual Maintenance Nature of works ಮರು-ನಿರ್ವಹಿಸುವಂತಹ ಕಾಮಗಾರಿಗಳಾಗಿರುತ್ತದೆ. ಪ್ರಸ್ತುತ ಅವುಗಳನ್ನು ಕೈಗೊಂಡು 13-14 ವರ್ಷಗಳಷ್ಟು ಸಮಯವು ಕಳೆದಿದ್ದು, ಸದರಿ ರಸ್ತೆ ಗುಂಡಿಗಳನ್ನು ಮುಚ್ಚಿರುವ ಡಾಂಬರೀಕರಣ ರಸ್ತೆ, ಕಾಂಕ್ರೀಟ್ ರಸ್ತೆಗಳು ಮತ್ತು ಮೋರಿಗಳ ನವೀಕರಣ ಮತ್ತು ಅಭಿವೃದ್ಧಿ ಅಥವಾ ನಿರ್ವಹಣೆಯ ಅವಶ್ಯಕತೆಗೆ ಅನುಗುಣವಾಗಿ ಮರುನಿರ್ವಹಣೆ ಮಾಡಲಾಗಿರುತ್ತದೆ ಎಂದು ಹಾಜರಿದ್ದವರು ವಿವರಿಸಿದ್ದು, ಪ್ರಮುಖ ವಿವರಗಳನ್ನು ಮಹಜರ್‌ನೊಂದಿಗೆ ಪ್ರತ್ಯೇಕವಾಗಿ ಮಂಡಿಸಲಾಗಿರುತ್ತದೆ. ಆಪಾದಿತ ಕಾಮಗಾರಿಗಳು ವಾರ್ಷಿಕ ನಿರ್ವಹಣೆಯದ್ದಾಗಿದ್ದು, ಅವುಗಳನ್ನು ನಿರ್ವಹಿಸಿ ಸಾಕಷ್ಟು ವರ್ಷಗಳು ಕಳೆದಿರುವುದರಿಂದ ದೂರುದಾರರು ಆಪಾದಿಸಲಾಗಿರುವ ಆರೋಪಗಳ ಸತ್ಯಾಸತ್ಯತೆಗಳನ್ನು ನಿಖರವಾಗಿ ಪರಿಶೀಲಿಸುವುದು ಅಸಾಧ್ಯವಾಗಿರುತ್ತದೆ. ಮುಂದುವರೆದು ಈ ತನಿಖೆ ಕೈಗೊಂಡ ಸಂದರ್ಭದಲ್ಲಿ ಸಾಂದರ್ಭಿಕವಾಗಿ ಲಭ್ಯರಾಗಿದ್ದ ಜನಪ್ರತಿನಿಧಿಗಳಾದ ಶ್ರೀ.ಪಿ.ಎನ್.ಸದಾಶಿವ, ಗವಿಪುರಂ ವಾರ್ಡ್ ಹಾಗೂ ಶ್ರೀ.ಕೆ.ಎ.ಚಂದ್ರಶೇಖರ್, ಮಾಜಿ ಮಹಾಪೌರರು/ಮಾಜಿ ಶಾಸಕರು (ಇವರು ಸದರಿ ವಾರ್ಡನ್ ನಿವಾಸಿಯಾಗಿರುತ್ತಾರೆ). ಆಪಾದಿತ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಸಕರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಸ್ಥಳ ಪರಿಶೀಲನೆಯ ನಂತರ, ಉಪವಿಭಾಗ ಕಚೇರಿಗೆ ಹಿಂದಿರುಗಿ, ಮಹಜರ್ ದಾಖಲಿಸಿ, ಎಲ್ಲರಿಗೂ ಕೇಳಿಸುವಂತೆ ಓದಿ, ಅವರ ಸಹಮತಿ ಇರುವ ಬಗ್ಗೆ ಅವರ ಸಹಿಗಳನ್ನು ಪಡೆದಿರುತ್ತೇನೆ.

ಅಂದು ಸ್ಥಳಪರಿಶೀಲನೆ ನಡೆಸಲಾದ ಕಾಮಗಾರಿಗಳು ವಾರ್ಷಿಕ ರೀತಿಯದ್ದಾಗಿದ್ದು, ಈ ಕಾಮಗಾರಿಗಳನ್ನು ನಿರ್ವಹಿಸಿ ಬಹುಕಾಲವಾಗಿರುವ ಕುರಿತು ಶ್ರೀ.ಎನ್.ಎಂ.ಧರ್ಮಪ್ಪ, ಪೋಲೀಸ್ ಉಪನಿರೀಕ್ಷಕರು, ನಗರ ವಿಭಾಗ, ಲೋಕಾಯುಕ್ತ ಬೆಂಗಳೂರು- ಇವರು ಈಗಾಗಲೇ ಅಭಿಪ್ರಾಯಿಸಿರುವಂತೆ ಹಾಗೂ ಆಪಾದಿತ ಕಾಮಗಾರಿಗಳ ಬಹುತೇಕ ದಾಖಲೆಗಳ ಲಭ್ಯವಿದ್ದು, ಅವುಗಳನ್ನು ಭೌತಿಕ ತನಿಖೆಯಲ್ಲಿ ಹಾಜರುಪಡಿಸಲಾಗಿರುತ್ತದೆ. ಆದರೆ, ಈ ದಾಖಲೆಗಳನ್ನು ಸುಳ್ಳುಬಿಲ್ಲುಗಳು, ಆಪಾದಿತ ಕಾಮಗಾರಿಗಳನ್ನು ಈ ಜಾಗದಲ್ಲಿ ನಿರ್ವಹಿಸಲಾಗಿಲ್ಲವೆಂಬ ದೂರುದಾರರ ಆರೋಪಗಳು ಪರಿಶೀಲನೆಯಲ್ಲಿ ಸಾಬೀತಾಗಿರುವುದಿಲ್ಲವೆಂದು ಅಭಿಪ್ರಾಯಿಸಲಾಗಿದೆ.

ಮುಂದುವರೆದು, ದಿನಾಂಕ 29.11.2017ರಂದು ಬೆಳ್ಳಿಗ್ಗೆ 10.30ಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಲಾ ನಗರ, ಬಿಬಿಎಂಪಿ, ಬೆಂಗಳೂರು – ಇವರ ಕಛೇರಿಗೆ ಹಾಜರಾಗಿರುತ್ತೇನೆ. ಈ ಸಂದರ್ಭದಲ್ಲಿ ಬಿಬಿಎಂಪಿಗೆ ಸಂಬಂಧಿಸಿರುವ ಕೆಳಕಂಡ ಶ್ರೀಯುತರು ಹಾಜರಿರುತ್ತಾರೆ.

ಎಚ್.ಟಿ.ಮೋಹನ್ ದಾಸ್ – ಕಾರ್ಯಪಾಲಕ ಇಂಜಿನಿಯರ್
ಎಚ್.ಚಂದ್ರಯ್ಯ – ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಡಿ.ಸತೀಶ್ ಜಿ.ಎಲ್.ಸೋಮಶೇಖರ್ ಮತ್ತು ಎಂ.ಪ್ರದೀಪ್ ಕುಮಾರ್ – ಶಾಖಾಧಿಕಾರಿಗಳು
ಸೈಯದ್ ಷಬೀರ್ ಅಲಿ, ಲೆಕ್ಕಾಧೀಕ್ಷಕರು.

ಪ್ರಕರಣದ ತನಿಖೆಯನ್ನು ವಿಚಾರಣೆಯಿಂದ ಆರಂಭಿಸಲಾಗಿರುತ್ತದೆ. ಸದರಿ ವಿಚಾರಣೆಯ ಸಂದರ್ಭದಲ್ಲಿ ಅಧಿಕಾರಿಗಳು ತಿಳಿಸಿದಂತೆ, ದೂರುದಾರರು ಉಲ್ಲೇಖಿಸಿರುವ 2013-14ರ ಸಾಲಿನ ಬಿ.ಆರ್.ನಂಬರ್‌ಗಳಾದ 166/ಎ, 563,05,13,16,18,49,52,42,43,44,45,103,104,105,106,151,152,153,154-ಇವು ಯಾವುದೇ ಸಿವಿಲ್ ಕಾಮಗಾರಿಗಳಿಗೆ ಸಂಬಂಧಪಟ್ಟಿರುವುದಿಲ್ಲದ ಕಾರಣ ಅವುಗಳನ್ನು ಇಂದು ಭೌತಿಕವಾಗಿ ಪರಿಶೀಲಿಸಲು ಸಾಧ್ಯವಿರುವುದಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ. ಮುಂದುವರೆದು, ಸದರಿ ಬಿ.ಆರ್.ನಂಬರ್‌ಗಳು ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟವುಗಳೆಂದು ಹೇಳಿ ಅವುಗಳ ದಾಖಲೆಗಳ ಪ್ರತಿಗಳನ್ನು ಈಗಾಗಲೇ ಸಂಸ್ಥೆಗೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆದಕಾರಣ, ಅಂದು ನಿಗದಗೊಳಿಸಲಾಗಿದ್ದಂತೆ (ಸಿವಿಲ್ ಕಾಮಗಾರಿಗಳನ್ನು ಒಳಗೊಳ್ಳದ ಹಿನ್ನಲೆಯಲ್ಲಿ) ದೂರಿನಲ್ಲಿ ಆಪಾದಿಸಿರುವ ಬಿ.ಆರ್.ನಂಬರ್‌ಗಳಿಗೆ ಸಂಬಂಧಿಸಿದ ಕಾಮಗಾರಿಗಳು

ಘನತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟವುಗಳಾಗಿದ್ದು, ನಿರ್ವಹಿಸಿ 3–4 ವರ್ಷಗಳು ಕಳೆದಿರುವುದರಿಂದ ಭೌತಿಕ ಪರಿಶೀಲನೆ ಸಾಧ್ಯವಾಗಿರುವುದಿಲ್ಲದ ಕಾರಣ, ದೂರುದಾರರ ಸದರಿ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಾಸ್ತವಿಕವೆಂದು ಅಭಿಪ್ರಾಯಿಸುತ್ತೇನೆ ಎಂದು ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ.”

18. ತನಿಖಾಧಿಕಾರಿಗಳು ರವರಾದ ಲಕ್ಷ್ಮಯ್ಯ ರವರ ವರದಿಯಿಂದ ಕೆ.ಟಿ.ಪಿ.ಪಿ ನಿಯಮಗಳು ಟೆಂಡರ್ ಷರತ್ತುಗಳನ್ನು ಹಾಗೂ ಶಾಂತಿನಗರ ವಿಭಾಗದ ಕಾರ್ಯಪಾಲಕ ಅಭಿಯಂತರರು ರವರ ಕಾರ್ಯಾದೇಶ ಪಾಲನೆ ಮಾಡಿಲ್ಲ ಎಂದು ಕಂಡುಬರುತ್ತದೆ ಹಾಗೂ ಹಾಜರಾತಿಯನ್ನು ಖಚಿತಪಡಿಸಿಕೊಳ್ಳದೇ ಹಣ ಪಾವತಿಸಲಾಗಿದೆ. ಸುಳ್ಳು ಹಾಜರಾತಿಯನ್ನು ದಾಖಲಿಸಿರುತ್ತಾರೆ. ಗುತ್ತಿಗೆದಾರರಿಗೆ ಹಣ ಪಾವತಿಸಿ ಕರ್ತವ್ಯಲೋಪ ಮಾಡಿರುತ್ತಾರೆ ಎಂದು ಅಭಿಪ್ರಾಯಿಸಿರುತ್ತಾರೆ.

19. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಕಂಡು ಬರುವ ಅಂಶಗಳೆಂದರೆ,

1. **ಶಾಂತಲಾನಗರ ವಾರ್ಡ್ ನಂ. 111, ನೀಲಸಂದ್ರ ವಾರ್ಡ್ ನಂ. 116 ಮತ್ತು ಶಾಂತಿನಗರ ವಾರ್ಡ್** ನಂ. 117, ಈ ಮೂರು ವಾರ್ಡ್‌ಗಳಲ್ಲಿ ದಿನಾಂಕ 14/12/2012 ರಿಂದ 01/12/2013 ರವರೆಗೆ ಕಸವನ್ನು ಸಾಗಾಣಿಕೆ ಮಾಡುವ ಸಲುವಾಗಿ ಆರ್‌ಟಿಜಿಎಸ್ ಮುಖಾಂತರ ದಿನಾಂಕ 11/09/2013 ರಂದು ರೂ. 45,60,000/– ಖರ್ಚು ಆಗಿರುತ್ತದೆ. ಡಿಸಿ ಬಿಲ್‌ನಲ್ಲಿ ಸಹಾಯಕ ಅಭಿಯಂತರರ ಸಹಿ ಇರುವುದಿಲ್ಲ. 1, 2 ಮತ್ತು 4ನೇ ಎದುರುದಾರರುಗಳು ಸಹಿ ಇರುತ್ತದೆ. ಗುತ್ತಿಗೆದಾರರ ಸಹಿ ಇರುವುದಿಲ್ಲ. ಆರ್‌ಟಿಜಿಎಸ್ ಮುಖಾಂತರ ಹಣ ಸಂದಾಯವಾಗಿದ್ದು ಯಾರ ಖಾತೆಗೆ ಹಣ ಸಂದಾಯವಾಗಿದೆ ದಾಖಲೆಗಳು ಲಭ್ಯವಿಲ್ಲ, ಅಕೌಂಟ್ ನಂಬರ್, ಬ್ಯಾಂಕ್‌ನ ಹೆಸರು ನಮೂದು ಇರುವುದಿಲ್ಲ.
2. ಎದುರುದಾರರಾದ 2,3,5 ಮತ್ತು 7ರವರು ಟೆಂಡರ್ ಷರತ್ತುಗಳನ್ನು ಪಾಲನೆ ಮಾಡದೆ ಕೆಟಿಪಿಪಿ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 3ನೇ ಎದುರುದಾರರು ಪೌರಕಾರ್ಮಿಕರ 31 ದಿವಸಗಳ ಹಾಜರಾತಿಯನ್ನು ನೀಡಿದ್ದು, 2 ಮತ್ತು 9ನೇ ಎದುರುದಾರರುಗಳು ದೃಢೀಕರಿಸಿರುತ್ತಾರೆ.

3. ಎದುರುದಾರರಾದ 8 ಮತ್ತು 9 ರವರು ಲೆಕ್ಕಪತ್ರ ಅಧೀಕ್ಷಕರು ಆಗಿದ್ದು, ಹಾಜರಾತಿಯನ್ನು ಖಚಿತಪಡಿಸಿಕೊಳ್ಳದೇ ಲೆಕ್ಕಪರಿಶೀಲನೆ ಮಾಡದೆ ಹಣ ಪಾವತಿ ಮಾಡಿರುತ್ತಾರೆ. 4ನೇ ಎದುರುದಾರರು ಲೆಕ್ಕ ಅಧೀಕ್ಷಕರಾಗಿದ್ದು ಸೂಚನೆಗಳನ್ನು ಪಾಲಿಸಿರುವುದಿಲ್ಲ.
4. ಎದುರುದಾರರಾದ 12 ಮತ್ತು 14 ರವರು ಕಿರಿಯ ಆರೋಗ್ಯ ಪರಿವೀಕ್ಷಕರು ಆಗಿದ್ದು, 13ನೇ ಎದುರುದಾರರು ಹಿರಿಯ ಆರೋಗ್ಯ ಪರಿವೀಕ್ಷಕರು ಆಗಿದ್ದು, ಹಾಜರಾತಿಯನ್ನು ದೃಢೀಕರಿಸಿರುತ್ತಾರೆ. ಮಾರ್ಗಸೂಚಿಗಳನ್ನು ಪಾಲಿಸಿರುವುದಿಲ್ಲ.

20. 1ನೇ ಎದುರುದಾರರಾದ ಮೋಹನ್ ದಾಸ್ ರವರು ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಗಳಾದ ಲಕ್ಷ್ಮಯ್ಯ ರವರು ತಮ್ಮ ವರದಿಯಲ್ಲಿ 1ನೇ ಎದುರುದಾರರು ದಿನಾಂಕ 30/8/2016ರಂದು ತಮ್ಮ ಹೇಳಿಕೆಯನ್ನು ಕೊಟ್ಟಿದ್ದು, ತಮ್ಮ ಹೇಳಿಕೆಯಲ್ಲಿ ಕಸ ಸಾಗಾಣಿಕೆ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ ಎಂದು ಹೇಳಿರುವುದರಿಂದ, 1ನೇ ಎದುರುದಾರರಾದ ಮೋಹನ್ ದಾಸ್ ರವರನ್ನು ಈ ಪ್ರಕರಣದಿಂದ ಕೈಬಿಡಬಹುದಾಗಿದೆ.

21. 2ನೇ ಎದುರುದಾರರಾದ ಚಂದ್ರಪ್ಪ ರವರು ಸಲ್ಲಿಸಿರುವ ತಕರಾರನ್ನು ಪರಿಶೀಲಿಸಿದಾಗ, ದಿನಾಂಕ 30/06/2014 ರಂದು ವಯೋ ನಿವೃತ್ತಿ ಹೊಂದಿರುತ್ತೇನೆ ಎಂದು ತಿಳಿಸಿರುತ್ತಾರೆ. 2ನೇ ಎದುರುದಾರರು ನಿವೃತ್ತಿ ಹೊಂದಿ ಸುಮಾರು 8 ವರ್ಷಗಳು ಆಗಿರುತ್ತದೆ. ಕೆಸಿಎಸ್ಆರ್ ನಿಯಮ 214(1)(ಬಿ) ii ರ ಪ್ರಕಾರ ನಾಲ್ಕು ವರ್ಷಗಳು ಕಳೆದಿರುವುದರಿಂದ ಕ್ರಮ ಕೈಗೊಳ್ಳಲು ಬರುವುದಿಲ್ಲ. ಘಟನೆಯು 2012-13 ನೇ ಸಾಲಿಗೆ ಸಂಬಂಧಿಸಿದ್ದು, ಸುಮಾರು 10 ವರ್ಷಗಳು ಕಳೆದಿರುತ್ತದೆ. ಆದುದರಿಂದ 2ನೇ ಎದುರುದಾರರಾದ ಚಂದ್ರಯ್ಯ ರವರನ್ನು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ.

22. 6ನೇ ಎದುರುದಾರರಾದ ಪಿ.ವನರಾಜ ರವರ ತಕರಾರನ್ನು ಪರಿಶೀಲಿಸಿದಾಗ, ದೂರಿನ ಅಂಶಗಳು 2013-14 ರ ಸಾಲಿಗೆ ಸಂಬಂದಿಸಿದೆ. ದಿನಾಂಕ 21/02/2013 ರಂದು ಶಾಂತಿನಗರ ಉಪವಿಭಾಗದಿಂದ ವರ್ಗಾವಣೆಗೊಂಡು ಕರ್ತವ್ಯದಿಂದ ಬಿಡುಗಡೆ ಹೊಂದಿ ಬೊಮ್ಮನಹಳ್ಳಿ ಉಪವಿಭಾಗಕ್ಕೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಕಸ ನಿರ್ವಹಣೆ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ತಯಾರಿಸಿರುವುದಿಲ್ಲ. 2013-14ನೇ ಸಾಲಿನಿಂದ ಕಸ ನಿರ್ವಹಣೆ ಬಿಲ್ಲುಗಳನ್ನು ಪಾವತಿಸಿರುವ ಬಗ್ಗೆ ದೂರು ಇಲ್ಲದೇ ಇರುವ ಕಾರಣ ಕೈ ಬಿಡುವಂತೆ ಕೋರಿರುತ್ತಾರೆ. ಕಛೇರಿ ಆದೇಶ ದಿನಾಂಕ 21/02/2013 ಅನ್ನು ಪರಿಶೀಲಿಸಿದಾಗ, 6ನೇ ಎದುರುದಾರರನ್ನು ವಾರ್ಡ್ ಸಂಖ್ಯೆ 117, ಶಾಂತಿನಗರ ಉಪವಿಬಾಗದಿಂದ ದಿನಾಂಕ 21/02/2013 ರ ಅಪರಾಹ್ನ

ಬಿಡುಗಡೆ ಮಾಡಿ ಬೊಮ್ಮನಹಳ್ಳಿ ಉಪವಿಭಾಗದ ವಾರ್ಡ್ ಸಂಖ್ಯೆ 188 ಬಿಳೇಕಲ್ಲು ಇಲ್ಲಿ ಖಾಲಿ ಇರುವ ಹುದ್ದೆಗೆ ನೇಮಿಸಿರುವುದು ಕಂಡುಬರುತ್ತದೆ. ಸೇವಾ ವಿವರಗಳನ್ನು ಪರಿಶೀಲಿಸಿದಾಗ 30/11/2009 ರಿಂದ 21/02/2013 ರವರೆಗೆ ಕರ್ತವ್ಯ ನಿರ್ವಹಿಸಿರುವುದು ಕಂಡುಬರುತ್ತದೆ. ದೂರನ್ನು ಪರಿಶೀಲಿಸಿದಾಗ 2013--14ನೇ ಸಾಲಿಗೆ ಸಂಬಂಧಿಸಿದಂತೆ ಆಪಾದಿಸಿರುತ್ತಾರೆ. ಆದುದರಿಂದ 6ನೇ ಎದುರುದಾರರನ್ನು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ.

23. 11ನೇ ಎದುರುದಾರರಾದ ಪಿ. ಶ್ರೀನಿವಾಸಲು ರವರು ದಿನಾಂಕ 02/11/2017 ರಂದು ಮೃತಪಟ್ಟಿರುತ್ತಾರೆ ಎಂದು ಮೃತರ ಮಗಳು ಅಶ್ವಿನಿ ರವರು ತಿಳಿಸಿರುತ್ತಾರೆ. 11ನೇ ಎದುರುದಾರರು ವಾರ್ಡ್ ನಂ. 111 ರ ಕಿರಿಯ ಆರೋಗ್ಯ ಪರಿವೀಕ್ಷಕರಾಗಿದ್ದು ಹಾಜರಾತಿಯನ್ನು ದೃಢೀಕರಿಸಿ ಕರ್ತವ್ಯಲೋಪ ಮಾಡಿದ್ದಾರೆ ಎಂದು ಆಪಾದಿಸಿರುತ್ತಾರೆ. ಆದರೆ, ಪಿ.ಶ್ರೀನಿವಾಸಲು ರವರು ಮರಣ ಹೊಂದಿರುವುದರಿಂದ ಸದರಿಯವರನ್ನು ಈ ಪ್ರಕರಣದಿಂದ ಕೈ ಬಿಡಬಹುದಾಗಿದೆ.

24. ಎದುರುದಾರರುಗಳಾದ 3 ರಿಂದ 5, 7 ರಿಂದ 10 ಮತ್ತು 12 ರಿಂದ 14 ರವರುಗಳು ನೀಡಿರುವ ಉತ್ತರಗಳನ್ನು ಪರಿಶೀಲಿಸಿದಾಗ, ಅವರುಗಳ ವಿರುದ್ಧದ ಪ್ರಕರಣವನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣಗಳನ್ನು ತೋರಿಸಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

25. ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರುಗಳಾದ 3 ರಿಂದ 5, 7 ರಿಂದ 10 ಮತ್ತು 12 ರಿಂದ 14 ರವರುಗಳು ಸರ್ಕಾರಿ ನೌಕರರುಗಳಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

26. ಎದುರುದಾರರುಗಳಾದ 3 ರಿಂದ 5, 7 ರಿಂದ 10 ಮತ್ತು 12 ರಿಂದ 14 ರವರುಗಳು ಸಾರ್ವಜನಿಕ/ಸರ್ಕಾರಿ ನೌಕರರುಗಳಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಎಸಗಿರುವುದರಿಂದ ಸದರಿಯವರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದ ಅಡಿ, ಈಗ ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಆದ್ದರಿಂದ ಎದುರುದಾರರುಗಳಾದ 3 ರಿಂದ 5, 7 ರಿಂದ 10 ಮತ್ತು 12 ರಿಂದ 14 ರವರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ

ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. **13ನೇ ಎದುರುದಾರರಾದ ಎನ್. ಅಣ್ಣಯ್ಯಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ಶಾಂತಿನಗರ ಉಪವಿಭಾಗ, ಬಿಬಿಎಂಪಿ, 9ನೇ ಮಹಡಿ, ಬೆಂಗಳೂರು ರವರು ದಿನಾಂಕ 30/6/2019 ರಂದು ಮತ್ತು 14ನೇ ಎದುರುದಾರರಾದ ಶ್ರೀ. ಟಿ.ಸೆಲ್ವರಾಜ್, ಕಿರಿಯ ಆರೋಗ್ಯ ನಿರೀಕ್ಷಕರು, ಜೀವನ್‌ಭೀಮಾನಗರ, ಬಿಬಿಎಂಪಿ, ಬೆಂಗಳೂರು ರವರು ದಿನಾಂಕ 30/11/2020 ರಂದು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 214(2)(ಬಿ) ನಿಬಂಧನೆಯನ್ನು ಅನ್ವಯಿಸಿ ಸರ್ಕಾರದ ಆದೇಶವನ್ನು ಶಿಸ್ತು ಪ್ರಾಧಿಕಾರಕ್ಕೆ ಕಳುಹಿಸುವಂತೆ ಕೋರಿದೆ.**

27. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

K.N. Phaneendra 13/9/22

**(ನ್ಯಾಯಾಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**